ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 11 ಮಾರ್ಚ್ 11, 1984 ಬೆಲೆ 60 ಪೈಸೆ

ಪ. ಬಂಗಾಲದಲ್ಲಿ ೭೨೬ ಕಿ. ಮಿ. ಬೃಹತ್ ಪಾದಯಾತ್ರೆ

ಪಶ್ಚಿಮ ಬಂಗಾಳ ಸಿ.ಪಿ.ಐ.(ಎಂ) ರಾಜ್ಯ ಸಮಿತಿಯು ಕರೆಯಂತೆ ರಾಜ್ಯದ ಉತ್ತರದಲ್ಲಿರುವ ಕೂಚ್‌ಬಿಹಾರ್‌ನಿಂದ ಕಲ್ಕತ್ತಾದ ವರೆಗೆ 726 ಕಿ.ಮಿ. ದೂರ ಬೃಹತ್ ಪಾದಯಾತ್ರೆ ಫೆಬ್ರವರಿ 19 ರಂದು ಪ್ರಾರಂಭವಾಗಿದೆ. 1982 ರಿಂದೀಚೆಗೆ ಪಶ್ಚಿಮ ಬಂಗಾಳದ ರಾಜಕೀಯ ಆಂದೋಲನದಲ್ಲಿ ಇದೊಂದು ಚಳುವಳಿಯ ಹೊಸ ಸ್ವರೂಪವಾಗಿ ಜನಪ್ರಿಯವಾಗುತ್ತಿದೆ. ಪ್ರಸ್ತುತ ಪಾದಯಾತ್ರೆಯು ಕೂಚ್ ಬಿಹಾರ್‌ನಿಂದ ಹೊರಟು ಜಲಪೈಗುರಿ, ಡಾರ್ಜಲಿಂಗ್, ದೀನಜ್‌ಪುರ್, ಮಾಲ್ಡಾ, ಮುರ್ಷಿದಾಬಾದ್, ನಾಡಿಯಾ, 24 ಪರಗಣ ಜಿಲ್ಲೆಗಳ ಮೂಲಕ ಹಾದು ಮಾರ್ಚ್ 15 ರಂದು ಕಲ್ಕತ್ತಾ ತಲುಪಲಿದೆ. ಈ ಯಾತ್ರೆಯಲ್ಲಿ ಜನಜೀವನದ ಎಲ್ಲ ಕ್ಷೇತ್ರಗಳ ಲಕ್ಷಾಂತರ ಜನ ಪಾಲ್ಗೊಳ್ಳುತ್ತಿದ್ದಾರೆ. ರಾಜ್ಯದ ಜನತೆ ಮತ್ತು ಪಕ್ಷದ ನಡುವೆ ನಿಕಟ ಸಂಬಂಧವನ್ನು ಈ ಪಾದಯಾತ್ರೆ ಸೃಷ್ಟಿಸುತ್ತಿರುವುದಾಗಿ ಕಾ. ಬುದ್ಧದೇವ ಭಟ್ಟಾಚಾರ್ಯ ಹೇಳಿದ್ದಾರೆ.

12 ಅಂಶಗಳ ಬೇಡಿಕೆಯನ್ನು ಒತ್ತಾಯಿಸಿ ದಾರಿಯುದ್ದಕ್ಕೂ ಕೂಗಿದ ಘೋಷಣೆಗಳು ರಾಜ್ಯಾದ್ಯಂತ ಪ್ರತಿಧ್ವನಿಸುತ್ತಿವೆ. ಪಾದಯಾತ್ರೆಯಲ್ಲಿ ಸಾಗುವ ಸಾವಿರ ಗಟ್ಟಲೆ ಕಾರ್ಯಕರ್ತರುಗಳನ್ನು ಜನತೆ ಹೂ ಮಳೆಗರೆದು ಸ್ವಾಗತಿಸುತ್ತಿದೆ. ಅನೇಕ ಕಡೆಗಳಲ್ಲಿ ಸುರಿಯುವ ಮಳೆಯನ್ನೂ ಲೆಕ್ಕಿಸದೆ ಮುನ್ನಡೆದು ಪಾದಯಾತ್ರೆ ಯೋಜಿತ ಗುರಿಯನ್ನು ತಲುಪುತ್ತಿದೆ.

ಪಾದಯಾತ್ರೆಯ ಉದ್ದೇಶವನ್ನು ವಿವರಿಸುತ್ತಾ ಪಕ್ಷದ ಪ. ಬಂಗಾಳ ರಾಜ್ಯ ಸಮಿತಿ ಸೆಕ್ರೆಟಾರಿಯಟ್ ಸದಸ್ಯ ಕಾ. ಬಿಮನ್ ಬಸು ಅವರು "ಈ ಪಾದಯಾತ್ರೆಯ ಉದ್ದೇಶ, ಪ. ಬಂಗಾಳ ಸರ್ಕಾರದ ನ್ಯಾಯಪೂರ್ಣ ಬೇಡಿಕೆಯಾದ ಕೇಂದ್ರ, ರಾಜ್ಯ ಸಂಬಂಧಗಳ ಪುನರ್ವಿಮರ್ಶೆ, ಅಪರೀತಿಯಲ್ಲಿ ತೀವ್ರವಾಗಿ ನಿರ್ಲಕ್ಷಿಸಿರುವ ರಾಜ್ಯದ ಉತ್ತರ ಭಾಗದ ಸಮಸ್ಯೆಗಳನ್ನು ಕುರಿತು ಜೀವನದ ಎಲಾ ಕ್ಷೇತ್ರಗಳ ಜನತೆಯನ್ನು ಅಣಿನೆರಿಸಿ ಕೇಂದ್ರ ಸರ್ಕಾರದ ವಿರುದ್ಧ ಚಳವಳಿ ನಡೆಸುವುದೇ ಆಗಿದೆ ಎಂದು ಹೇಳಿದ್ದಾರೆ.

ಅಲ್ಲದೆ "ಕೇಂದ್ರದ ಮಲತಾಯಿ ಧೋರಣೆಯ ವಿರುದ್ಧ ಪಕ್ಷದ ರಾಜ್ಯ ಸಮಿತಿಯು ಅವಿಶ್ರಾಂತ ಹೋರಾಟ ನಡೆಸುತ್ತಿದೆ. ಇದರ ಒಂದು ಅಂಗವಾಗಿ ಈ ಯಾತ್ರೆಯನ್ನು ಸಂಘಟಿಸಲಾಗಿದೆ" ಎಂದರು.

ಕೂಚ್ ಬಿಹಾರ್‌ನಲ್ಲಿ ಪಾದಯಾತ್ರೆಯನ್ನು ಉದ್ಘಾಟಿಸಿದ ಕಾ. ಸಮರ್ ಮುಖರ್ಜಿ ಅವರು "ಪ. ಬಂಗಾಳ ಜನತೆಯ ಹೋರಾಟದ ಒಂದು ಭಾಗ ಈ ಕಾರ್ಯಕ್ರಮ. ಕೇಂದ್ರ ಸರಕಾರ ರಾಜ್ಯಗಳ ಅವಶ್ಯಕತೆಗಳ ಕುರಿತು ತೋರುವ ನಿರ್ಲಕ್ಷತೆ ಎಲ್ಲಿಯವರೆಗೂ ಮುಂದುವರೆಯುವುದೋ ಅಲ್ಲಿನವರೆಗೂ ಈ ಹೋರಾಟ ನಡೆಯುತ್ತಲೇ ಇರುತ್ತದೆ. ಸಾಮಾಜಿಕ ಬದಲಾವಣೆಗಾಗಿ ನಡೆಯುವ ಹೋರಾಟಕ್ಕೂ ಈ ಹೋರಾಟಕ್ಕೂ ಹತ್ತಿರದ ಸಂಬಂಧವಿದೆ" ಎಂಬುದಾಗಿ ಹೇಳಿದರು.

ಪಾದಯಾತ್ರೆಯ ಬೇಡಿಕೆಗಳು

1. ನೀರಾವರಿಯ ಅಭಾವ ಉತ್ತರ ಬಂಗಾಲದ ಕೃಷಿ ಕ್ಷೇತ್ರ ಅಭಿವೃದ್ಧಿ ಹೊಂದದ್ದಕ್ಕೆ ಪ್ರಮುಖ ಕಾರಣ. ಆದ್ದರಿಂದ ತೀಸ್ತಾಲ್ ಯೋಜನೆಯನ್ನು ಶೀಘ್ರವಾಗಿ ಪೂರೈಸಬೇಕು. ಹಾಗೂ ಮಹಾನಂದ ಮಹಾಯೋಜನೆಯನ್ನು ತಕ್ಷಣ ಜ್ಯಾರಿ ಮಾಡಬೇಕು.

2. ಉತ್ತರ ಬಂಗಾಲದ ಆರ್ಥಿಕತೆಯ ಮುಖ್ಯ ಆಧಾರವಾದ ಚಹಾ ಕೈಗಾರಿಕೆಯನ್ನು ಆಧುನೀಕರಿಸಲು, ಸರಕಾರ ವಹಿಸಿಕೊಂಡ ತೋಟಗಳನ್ನು ನಡೆಸಲು ಸಹಾಯ ಧನ ನೀಡಬೇಕು.

3. ಅರಣ್ಯ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಬೇಕು, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕು.

4. ಬ್ಯಾಂಕ್ ಸಾಲದ ಧೋರಣೆಯನ್ನು ಇಲ್ಲಿಯ ಬಡವರಿಗೆ ನಿಜವಾಗಿ ಹಾಗೂ ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತೆ ಬದಲಿಸಬೇಕು.

5. ಉತ್ತರ ಬಂಗಾಲಕ್ಕೆ, ರೈಲು, ವಿಮಾನ, ಅಂಚೆ, ಹೆದ್ದಾರಿಗಳ ಮೂಲಕ ಸಂಪರ್ಕ ವ್ಯವಸ್ಥೆಯನ್ನು ಉತ್ತಮ ಪಡಿಸಬೇಕು.

6. ಮಾಲ್ಡಾ ಹಾಗೂ ಡಾರ್ಜಿಲಿಂಗ್‌ಗಳಲ್ಲಿ ಡೈರಿ ಅಭಿವೃದ್ಧಿಗೆ ಹಾಗೂ ಮೀನು ಮಾರಾಟಕ್ಕೆ, ಹೊಸ ಯೋಜನೆ ತಯಾರಿಸಬೇಕು.

7. ವೈದ್ಯಕೀಯ ಸೌಲಭ್ಯ ಹೆಚ್ಚಿಸಲು ಹಾಗೂ ಉತ್ತರ ಬಂಗಾಲ ಮೆಡಿಕಲ್ ಕಾಲೇಜು ಹಾಗೂ ಆರೋಗ್ಯ ಕೇಂದ್ರಗಳನ್ನು ಸುಧಾರಿಸಬೇಕು.

8. ನಿರಕ್ಷರತೆ ನಿವಾರಣೆಗೆ ಒತ್ತು ನೀಡಬೇಕು.

9. ನೇಪಾಲಿ ಭಾಷೆಗೆ ಮಾನ್ಯತೆ ಮತ್ತು ನೂರು ಗುಡ್ಡಗಾಡು ಡಿವಿಜನ್‌ಗಳಿಗೆ ಪಶ್ಚಿಮ ಬಂಗಾಳದೊಳಗೆ ಸ್ವಯಮಾಡಳಿತದ ಬೇಡಿಕೆ ಪೂರೈಸಬೇಕು.

10. ಪ್ರತಿಯೊಂದು ಪಟ್ಟಣದಲ್ಲೂ ನಾಗರಿಕ ಸೌಲಭ್ಯ ಸುಧಾರಿಸಬೇಕು.

11. ಸಿಲಿಗುರಿ–ಜಲಪೈಗುರಿ ಕ್ಷೇತ್ರದಲ್ಲಿ ಕೈಗಾರಿಕಾ ಸಂಕೀರ್ಣ ಸ್ಥಾಪಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು.

12. ಪರಿಶಿಷ್ಟ ಮತ್ತು ಪರಿಶಿಷ್ಟ ಜನಾಂಗಗಳ ಜನರ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗೆ ತಕ್ಕ ಕ್ರಮ ಕೈಗೊಳ್ಳಬೇಕು.

ನಟ ರಾಜಕುಮಾರ್ ಮೇಲೆ ಹಲ್ಲೆ

ಕದಡಿದ ಭಾಷಾ ಬಾಂಧವ್ಯ

ಮಾರ್ಚ್ 3 ರಂದು ಉದಕಮಂಡಲದ ಬಳಿ ಚಿತ್ರೀಕರಣವೊಂದರ ಸಂದರ್ಭದಲ್ಲಿ ನಟ ಡಾ॥ ರಾಜ್‌ಕುಮಾರ್ ರವರಿದ್ದ ಚಿತ್ರತಂಡದ ಮೇಲಿನ ಹಲ್ಲೆಯ ಪ್ರಕರಣ ನಗರದಲ್ಲಿ ಮತ್ತಿತರ ಕಡೆಗಳಲ್ಲಿ ಗಂಭೀರ ಪ್ರತಿಕ್ರಿಯೆಗೆ ಕಾರಣವಾಯಿತು.

ಹಲ್ಲೆಯ ಸುದ್ದಿ ತಿಳಿದ ನಂತರದ ಕ್ಷಣಗಳಲ್ಲೇ ವ್ಯಾಪಕ ಹಿಂಸಾಕೃತ್ಯಗಳ ಆರಂಭವಾಯಿತು. ರಾಜ್ ಅಭಿಮಾನಿಗಳೆಂದು ಹೇಳಿಕೊಂಡ ಕೆಲವರು ಬೆಂಗಳೂರಿನ ಬೀದಿಗಳಲ್ಲಿ ದಾರಿಯುದ್ಧಕ್ಕೂ ಅಂಗಡಿಗಳು, ಮನೆಗಳ ಮೇಲೆ ಕಲ್ಲು ತೂರುತ್ತಾ ನಡೆದಂತೆ ಯಾವುದೇ ಕರೆಯಿಲ್ಲದೆ "ಬೆಂಗಳೂರು ಬಂದ್" ಆಯಿತು. ತಮಿಳರ ವಿರುದ್ಧ ಘೋಷಣೆ ಕೂಗುತ್ತಾ ಕೈಗೆ ಸಿಕ್ಕಿದ ವಾಹನಗಳನ್ನೆಲ್ಲಾ ಬೆಂಕಿಗೆ ಆಹುತಿ ಕೊಡುತ್ತಾ ಹೊರಟರು. ನಗರ ಸಾರಿಗೆ ಬಸ್ಸುಗಳಲ್ಲೂ ತಮ್ಮ ದರ್ಬಾರು ನಡೆಸಿದರು. ಕೆಲವು ಚಲನಚಿತ್ರಮಂದಿರಗಳ ಮೇಲೂ ಧಾಳಿ ನಡೆಯಿತು. ಮೊದಲೇ ಜಡಿ ಮಳೆಯಿಂದ ಅಸ್ತವ್ಯಸ್ತಗೊಂಡಿದ್ದ ಜನಜೀವನ ಈ ಘಟನಾವಳಿಗಳಿಂದ ಮತ್ತಷ್ಟು ಹದಗೆಟ್ಟಿತು. ಭಯಗ್ರಸ್ತ ಭಾಷಾ ಅಲ್ಪ ಸಂಖ್ಯಾತರು ರಕ್ಷಣೆಗಾಗಿ ದಿಕ್ಕೆಟ್ಟು ಓಡಿದರು. ಯಾರೋ ಕೆಲವು ತಿಳಿಗೇಡಿಗಳ ಅವಿವೇಕತನಕ್ಕೆ ಮುಗ್ಧ ಜನರು ಉದ್ರಿಕ್ತ ಭಾಷಾಭಿಮಾನಿಗಳ ಧಾಳಿಗೆ ತುತ್ತಾಗಬೇಕಾಯಿತು. ಮಳೆಯಿದ್ದ ಕಾರಣ ಹಿಂಸಾಚಾರದ ಪ್ರಮಾಣವು ಬಹಳಷ್ಟು ಕಡಿಮೆಯಾಯಿತು.

ಇದರೊಂದಿಗೆ ಜನತಾ ಪಕ್ಷದ ಕಛೇರಿಯ ಮೇಲೂ ಧಾಳಿ, ಆವರಣದಲ್ಲಿದ್ದ ವಾಹನಗಳಿಗೆ ಜಖಂ ಮಾಡಿದ್ದಲ್ಲದೆ ಕೆಲವು ಪ್ರಮುಖ ಮುಂದಾಳುಗಳ ಮೇಲೂ ಹಲ್ಲೆ ನಡೆಸಲಾಯಿತು. ಈ ಘಟನೆಯು ರಾಜ್ಯದಲ್ಲಿ ಅರಾಜಕತೆಯ ಪರಿಸ್ಥಿತಿಯನ್ನು ನಿರ್ಮಿಸಿ ಜನತಾ ಸರ್ಕಾರವನ್ನು ಉರುಳಿಸುವ ಕಾಂಗ್ರೆಸ್ (ಐ) ಪಕ್ಷದ ಒಳಸಂಚನ್ನು ಮತ್ತೊಮ್ಮೆ ಬಯಲು ಮಾಡಿದೆ. ಎಂತಹ ಸೂಕ್ಷ್ಮ ಘಟನೆಗಳನ್ನೂ ತನ್ನ ಈ ದುರುದ್ದೇಶದ ಸಾಧನೆಗೆ ಬಳಸಿಕೊಳ್ಳಲು ಹಿಂಜರಿಯದ ಈ ವಂಚಕರ ಬಗ್ಗೆ ಜನತೆ ಜಾಗೃತರಾಗಿರ ಬೇಕಾಗಿದೆ

ರಾಜ್‌ಕುಮಾರ್‌ರವರ ಮೇಲಿನ ಹಲ್ಲೆ ಸರ್ವಥಾ ಖಂಡನೀಯ. ಅವರಿಗೆ ಸೂಕ್ತ ರಕ್ಷಣೆ ಒದಗಿಸಲು ವಿಫಲರಾದ ಅಧಿಕಾರಿಗಳನ್ನು ಕೂಡಲೇ ಸಸ್ಪೆಂಡ್ ಮಾಡಿ ನ್ಯಾಯಾಂಗ ತನಿಖೆಯ ಆಜ್ಞೆ ಹೊರಡಿಸಿದ ತಮಿಳುನಾಡು ಸರ್ಕಾರದ ಕ್ರಮ ಸ್ವಾಗತಾರ್ಹ. ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆಯವರೂ ಸಂದರ್ಭೋಚಿತವಾಗಿ ವರ್ತಿಸಿದ್ದಾರೆ. ರಾಜ್ ಮನೆಗೆ ಸೌಜನ್ಯದ ಭೇಟಿ ನೀಡಿ ರಕ್ಷಣೆಯ ಭರವಸೆ ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಇಂತಹ ಸನ್ನಿವೇಶಗಳ ದುರುಪಯೋಗ ಪಡೆಯಲೆತ್ನಿಸುವ ಸಮಾಜಘಾತುಕ ವ್ಯಕ್ತಿಗಳ ಮೇಲೆ ಕಂಡಲ್ಲಿ ಗುಂಡಿಕ್ಕಲು ಆದೇಶ ನೀಡಿದ್ದಾರೆ. ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಬಿಗಿ ಕ್ರಮ ಅಗತ್ಯವಾಗಿರುವುದಾದರೂ ಪೋಲೀಸರು ಈ ಅಸ್ತ್ರದ ದುರುಪಯೋಗ ಪಡೆಯದಂತೆ ಎಚ್ಚರಿಕೆ ವಹಿಸುವುದೂ ಅಗತ್ಯವಾಗಿದೆ. ರಾಜ್ಯದ ಭಾಷಾ ಅಲ್ಪಸಂಖ್ಯಾತರಿಗೆ ಸಂಪೂರ್ಣ ರಕ್ಷಣೆ ಒದಗಿಸಿ ಭರವಸೆ ಮೂಡಿಸುವುದು ಜನತಾ ಸರ್ಕಾರದ ಹೊಣೆಯಾಗಿದೆ. ಕನ್ನಡಿಗರು ಮತ್ತು ಕನ್ನಡೇತರರು ಸೌಹಾರ್ದಯುತವಾಗಿ ಜೀವಿಸಲು ಅಗತ್ಯ ವಾತಾವರಣ ನಿರ್ಮಿಸುವುದು ಜನತೆಯ ಕರ್ತವ್ಯವಾಗಿದೆ. ಕೈಗಾರಿಕಾ ನಗರವಾದ ಬೆಂಗಳೂರು ನಗರದ ಕಾರ್ಮಿಕ ವರ್ಗದ ಮೇಲೆ ಗುರುತರವಾದ ಜವಾಬ್ದಾರಿಯಿದೆ. ದುಡಿಯುವ ಜನತೆಯ ಐಕ್ಯತೆಯನ್ನು ರಕ್ಷಿಸಲು ಮತ್ತು ಕರ್ನಾಟಕದ ಸಮಸ್ತ ಜನತೆಯ ಸಮಗ್ರ ಅಭಿವೃದ್ಧಿಗೆ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಪಡಿಸಬೇಕಾಗಿದೆ. ಅತೃಪ್ತ ಜನತೆಯ ಗಮನವನ್ನು ಬೇರೆಡೆಗೆ ಸೆಳೆಯಲೆತ್ನಿಸುತ್ತಿರುವ ದುಷ್ಟ ಶಕ್ತಿಗಳ ಪಿತೂರಿಯನ್ನು ಸೋಲಿಸಿ ರಾಷ್ಟ್ರದ ಸಮಗ್ರತೆಯನ್ನು ಸಂರಕ್ಷಿಸಬೇಕಾಗಿದೆ. ಈ ಪ್ರಕರಣಕ್ಕೆ ಪ್ರತಿಕ್ರಿಯೆಯಾಗಿ ಎರಡೂ ರಾಜ್ಯಗಳಲ್ಲಿ ಭಾಷಾ ಅಲ್ಪಸಂಖ್ಯಾತರ ಮೇಲೆ ದ್ವೇಷ ಭಾವನೆ ಕೆರಳಿಸಲು ಸಂಕುಚಿತವಾದಿ ಶಕ್ತಿಗಳು ಯತ್ನಿಸುತ್ತಿರುವುದು ತೀರಾ ಕಳವಳಕಾರಿಯಾಗಿದೆ. ದೇಶದ ಹಲವೆಡೆ ಪ್ರಬಲವಾಗುತ್ತಿರುವ ಛಿದ್ರಕಾರಿ ಚಳುವಳಿಗಳ ಹಿನ್ನೆಲೆಯಲ್ಲಿ ಕರ್ನಾಟಕದ ರಾಜ್ಯದಲ್ಲಿನ ಎಲ್ಲಾ ಪ್ರಜಾಪ್ರಭುತ್ವವಾದಿ ರಾಷ್ಟ್ರಪ್ರೇಮಿ ಶಕ್ತಿಗಳೂ ಈ ಅಪಾಯದ ವಿರುದ್ಧ ಎಚ್ಚೆತ್ತು ಹೋರಾಡುವುದು ಅತ್ಯಗತ್ಯವಾಗಿದೆ.

ಅಣು ಅಸ್ತ್ರ ಅಪಾಯದ ವಿರುದ್ಧ ವೈದ್ಯರ ಕರೆ

ಅಣುಯುದ್ಧ ಅಪಾಯದ ವಿರುದ್ಧ ಭಾರತೀಯ ವೈದ್ಯರು ಮಾಡಿರುವ ಮನವಿಯನ್ನು ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದ ಸಂಸ್ಥೆಯು ನವದೆಹಲಿಯಲ್ಲಿ ಈಚೆಗೆ ಬಿಡುಗಡೆ ಮಾಡಿತು.

"ಅಣುಬಾಂಬಿನ ದುಷ್ಪರಿಣಾಮಗಳ ಕಡೆ ಜನರ ಗಮನ ಸೆಳೆಯುವುದು ನಮ್ಮ ಪರಮ ಕರ್ತವ್ಯವೆಂದು ನಾವು ತಿಳಿದಿದ್ದೇವೆ. ಅಣುಯುದ್ಧ ಮಾನವಕುಲವನ್ನೇ ಸಂಪೂರ್ಣ ನಾಶ ಮಾಡಬಲ್ಲದು ಎಂಬುವದರಲ್ಲಿ ಈಗ ಸಂಶಯ ಉಳಿದಿಲ್ಲ. ಮನುಷ್ಯ, ಪ್ರಾಣಿ ಮತ್ತು ಇಡೀ ಪರಿಸರವೇ ನಾಶವಾಗುವುದರಿಂದ ಮತ್ತೆ ಜೀವ ಕಣಗಳು ಇಲ್ಲಿ ಉದಯಿಸಲು ಸಾಧ್ಯವೇ ಇಲ್ಲ. ಮನುಕುಲದ ಈ ನಾಶಕ್ಕೆ ವೈದ್ಯರು ಹೊರತಲ್ಲವಾದ್ದರಿಂದ ಜೀವಿಗಳನ್ನು ಯಾರು ಉಳಿಸುವರು ?"

ಅಣುಬಾಂಬಿನ ಪರಿಣಾಮವನ್ನು ಯಾವ ನಾಗರಿಕ ರಕ್ಷಣೆ, ಆಶ್ರಯ ಅಥವಾ ವೈದ್ಯ ಪದ್ಧತಿಯೂ ಉಳಿಸಲಾರದು. ಇಡೀ ಪರಿಸರಕ್ಕೆ ಸಂಭವಿಸುವ ಈ ವಿಪತ್ತಿನಿಂದ ಜೀವರಾಶಿ

(8ನೇ ಪುಟ ನೋಡಿ)

ಭಾರತದಲ್ಲಿ ಕ್ರಾಂತಿಯ ಮೂಲಭೂತ ಪ್ರಜಾಸತ್ತಾತ್ಮಕ ಕರ್ತವ್ಯಗಳು

—ಇ. ಎಂ. ಎಸ್. ನಂಬೂದಿರಿಪಾಡ್

ಕಾರ್ಮಿಕ ವರ್ಗದ ಕ್ರಾಂತಿಯ ಹಾದಿಯನ್ನು ನಿರ್ಣಯಿಸುವ ಮೂಲಭೂತ ಸೈದ್ಧಾಂತಿಕ ಅಂಶಗಳೇನು ?

ಮೊದಲನೆಯದಾಗಿ ;

ಪ್ರಸ್ತುತ ಅಂತರರಾಷ್ಟ್ರೀಯ, ರಾಷ್ಟ್ರೀಯ ಸನ್ನಿವೇಶದಲ್ಲಿ ಕ್ರಾಂತಿಕಾರಕವಾದ ಅಧಿಕಾರವನ್ನು ಸ್ಥಾಪಿಸುವ ದೃಷ್ಟಿಕೋನವನ್ನು ಕೈಬಿಡದೆ ಅದಕ್ಕೆ ಜನತೆಯನ್ನು ತಯಾರಿಗೊಳಿಸಲು ಬೇಕಾದ ಎಲ್ಲಾ ಮಾರ್ಗಗಳನ್ನು ಅಂಗೀಕರಿಸಬೇಕು.

ಒಂದು ಕಡೆ ಸಶಸ್ತ್ರ ಸಂಘರ್ಷಗಳಿಲ್ಲದೆ ಅಹಿಂಸಾ ಮಾರ್ಗದಲ್ಲಿ ಸಾಮಾಜಿಕ ಕ್ರಾಂತಿಯನ್ನು ನಡೆಸಬಹುದೆಂಬ ವ್ಯಾಮೋಹ ; ಮತ್ತೊಂದು ಕಡೆ ಕ್ರಾಂತಿಕಾರೀ ಮಾರ್ಗಗಳನ್ನು ಅಂಗೀಕರಿಸುವ ಹೆಸರಿನಲ್ಲಿ ಸಾಮೂಹಿಕ ಸಂಘಟನೆ, ಪತ್ರಿಕಾ ಪ್ರಕಟಣೆಗಳನ್ನೊಳಗೊಂಡಂತೆ ಎಲ್ಲಾ ರೀತಿಯ ಪ್ರಸಾರ ಮಾಧ್ಯಮಗಳನ್ನು ಉಪಯೋಗಿಸಿಕೊಂಡು ರಾಜಕೀಯ ಪ್ರಚಾರ ನಡೆಸಲು, ಚುನಾವಣಾ ಹೋರಾಟಗಳಲ್ಲಿ ಭಾಗವಹಿಸಲು ಚುನಾಯಿತ ಸಂಸ್ಥೆಗಳನ್ನು ಉಪಯೋಗಿಸುವುದನ್ನೊಳಗೊಂಡಂತೆ ಎಲ್ಲಾ ಕಾನೂನು ವಿಧೇಯಕ ಮಾರ್ಗಗಳನ್ನು ಪರಿಸ್ಥಿತಿಗನುಸಾರವಾಗಿ ಉಪಯೋಗಿಸಲು ನಿರಾಕರಿಸುವುದು–ಈ ಎರಡು ಧೋರಣೆಗಳ ವಿರುದ್ಧವಾಗಿಯೂ ಹೋರಾಡಬೇಕು.

ಎರಡನೆಯದಾಗಿ ;

ಕ್ರಾಂತಿಯನ್ನು ನಡೆಸಬೇಕಾದದ್ದು 'ಧೀರ ಸಾಹಸಿಗಳಾದ' ಕೆಲವೇ ವ್ಯಕ್ತಿಗಳಲ್ಲ. ಜನತೆ ಹಾಗೂ ಸಮೂಹಗಳು ಕ್ರಾಂತಿಕಾರಿ ದಿಶೆಯಲ್ಲಿ ಮುನ್ನಡೆಯುವಾಗ ಅದರ ಅಂಗವಾಗಿ ಅವರು ನಡೆಸುವ ಬಲಪ್ರಯೋಗವನ್ನು ಕಮ್ಯೂನಿಸ್ಟರು ಆಕ್ಷೇಪಿಸುವುದಿಲ್ಲ. ಅದರಲ್ಲಿ ಜನತೆಗೆ ಬೇಕಾದ ಸಕಲ ನೆರವನ್ನೂ ಮಾಡುತ್ತದೆ. ಆದರೆ ಜನತೆಯ ಹೋರಾಟಗಳೊಂದಿಗೆ ಸಂಪರ್ಕವಿಲ್ಲದೆ ಕೆಲವು ವ್ಯಕ್ತಿಗಳು ಸೇರಿ ನಡೆಸುವ ಬಲಪ್ರಯೋಗವೆಂಬ ಮಾರ್ಗವನ್ನು ಕಮ್ಯೂನಿಸ್ಟರು ತಿರಸ್ಕರಿಸುತ್ತಾರೆ. ಭಾರತದಲ್ಲಿ ಹಳೆಯ 'ಭಯೋತ್ಪಾದಕತೆ' ಯ ನಂತರ ರೂಪಗೊಂಡ 'ನಕ್ಸಲ್‌ವಾದ" ಮುಂತಾದ ಮಾರ್ಗಗಳನ್ನು ತಿರಸ್ಕರಿಸುವುದು, ಕೇರಳದ ಕಯ್ಯೂರಿನಿಂದ ಹಿಡಿದು ಪುನ್ನಪ್ರ-ವಯಲಾರ್ ವರೆಗೆ ನಡೆದ ಹೋರಾಟಗಳು ಪಶ್ಚಿಮ ಬಂಗಾಳದ ತೇಬಾಗ ಸಮರ, ತೆಲಂಗಾಣ ಹೋರಾಟ, ಮಹಾರಾಷ್ಟ್ರದ ಆದಿವಾಸಿ ಹಾಗೂ ರೈತರ ಹೋರಾಟ ಮುಂತಾದ ಎಲ್ಲಾ ಜನಸಾಮಾನ್ಯರ ಹೋರಾಟಗಳನ್ನು ಬೆಂಬಲಿಸುವುದು ಇದೇ ಕಮ್ಯೂನಿಸ್ಟರ ಮಾರ್ಗವೆಂದರ್ಥ.

ಮೂರನೆಯದಾಗಿ ;

ಭಾರತದ ಜನತೆಯೆಂದು ಸಾಮಾನ್ಯವಾಗಿ ಹೇಳಿದರೆ ಸಾಲದು. ಅದರಲ್ಲಿ ಅತ್ಯಂತ ಬಲಿಷ್ಠವಾಗಿ ಪ್ರವೃತ್ತಿಸುವುದು ಕಾರ್ಮಿಕ ವರ್ಗ- ಅದರ ಸಂಘಟನೆಗಳಾದ ಟ್ರೇಡ್ ಯೂನಿಯನ್‌ಗಳ ಚಟುವಟಿಕೆಗಳ ಮೂಲಕ ಕಾರ್ಮಿಕ ವರ್ಗವನ್ನು ಒಂದು ವರ್ಗವೆಂಬ ರೀತಿಯಲ್ಲಿ ಸಂಘಟಿಸಿ ಆ ವರ್ಗ ರಾಜಕೀಯ ಕ್ರಾಂತಿಕಾರಿ ಚಳುವಳಿಯಲ್ಲಿ ನಾಯಕತ್ವವನ್ನು ವಹಿಸಬೇಕು. ಆ ವರ್ಗದಲ್ಲಿ ಕ್ರಾಂತಿಕಾರಿ ಪ್ರಜ್ಞೆ ಹಾಗೂ ಸಂಘಟನಾ ಪ್ರಜ್ಞೆಯನ್ನು ಬೆಳೆಸುವುದು, ಅದರ ಮುಂಚೂಣಿ ವಿಭಾಗಕ್ಕೆ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ತರಬೇತಿ ಕೊಟ್ಟು ಆ ಮುಂಚೂಣಿಯನ್ನು ರೈತಾಪಿ ಸಮುದಾಯ ಮತ್ತು ಇತರ ದುಡಿಯುವ ಜನಸಾಮಾನ್ಯರ ನಾಯಕನನ್ನಾಗಿ ಬೆಳೆಸುವುದು–ಈ ಕರ್ತವ್ಯಗಳನ್ನೆಲ್ಲಾ ಪೂರೈಸದೆ ಕ್ರಾಂತಿಯು ಯಶಸ್ವಿಯಾಗುವುದಿಲ್ಲ.

ನಾಲ್ಕನೆಯದಾಗಿ

ಕಾರ್ಮಿಕ ವರ್ಗವು ಈ ನಾಯಕತ್ವವನ್ನು ವಹಿಸಬೇಕಾದರೆ ಸಾಮ್ರಾಜ್ಯಶಾಹಿ ಹಾಗೂ ಗುತ್ತೇದಾರಿ ಬಂಡವಾಳಶಾಹಿಗಳ ವಿರುದ್ಧವಾಗಿ ಹೋರಾಡುವ ಎಲ್ಲಾ ವರ್ಗಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗಬೇಕು. ಇದರಲ್ಲಿ ಪ್ರಥಮ ಸ್ಥಾನ ರೈತಾಪಿ ಜನತೆಯೊಂದಿಗೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅವರಷ್ಟೇ ಅಲ್ಲದೆ ನಗರ ಪ್ರದೇಶಗಳಲ್ಲೂ ಹಾಗೂ ಗ್ರಾಮ ಪ್ರದೇಶಗಳಲ್ಲಿ ಇರುವ ಮಧ್ಯಮ ವರ್ಗದವರೂ ಇದ್ದಾರೆ. ವಿದೇಶಿ ಬಂಡವಾಳದ ಶೋಷಣೆಗೊಳಗಾಗುವ ಬಂಡವಾಳಶಾಹಿ ವಿಭಾಗವೂ ಇದೆ. ಎಲ್ಲದಕ್ಕಿಂತಲೂ ಮೇಲಾಗಿ ವರ್ಷಾನುಗಟ್ಟಲೆ ನಡೆಸಿದ ಹೋರಾಟದ ಫಲವಾಗಿ ಗಳಿಸಿದ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಭದ್ರಗೊಳಿಸಲು ಹಾಗೂ ವಿಸ್ತಾರಗೊಳಿಸಲು ಇಚ್ಛಿಸುವ ವ್ಯಕ್ತಿಗಳೂ, ಸಮೂಹಗಳೂ ಎಲ್ಲಾ ವರ್ಗಗಳಲ್ಲೂ, ವಿಭಾಗಗಳಲ್ಲೂ ಇದ್ದಾರೆ. ಇವರನ್ನೆಲ್ಲಾ ಒಟ್ಟುಗೂಡಿಸಿ ಒಂದು ವಿಶಾಲ ಜನತಾ ಪ್ರಜಾಪ್ರಭುತ್ವ ರಂಗವನ್ನು ಕಟ್ಟುವುದೇ ಇಂದಿನ ಅವಶ್ಯಕತೆಯಾಗಿದೆ.

ಐದನೆಯದಾಗಿ ;

ಈ ಜನತಾ ಪ್ರಜಾಪ್ರಭುತ್ವ ರಂಗದ ತುರ್ತು ಕರ್ತವ್ಯ ಸಮಾಜವಾದವನ್ನು ಕಟ್ಟುವುದಲ್ಲ. ಕಮ್ಯೂನಿಸ್ಟ್ ಪಕ್ಷದ ಗುರಿಯು ಒಂದು ಸಮಾಜವಾದಿ ಸಮಾಜವನ್ನು ರಚಿಸುವುದೇ ಆಗಿದ್ದರೂ ಅದನ್ನು ಜಾರಿಗೊಳಿಸಲು ಇರಬೇಕಾದ ವಸ್ತುನಿಷ್ಠ ಪರಿಸ್ಥಿತಿಯು ಇಂದು ಭಾರತದಲ್ಲಿಲ್ಲ. ಅದನ್ನು ಸೃಷ್ಟಿಸುವುದೇ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಕರ್ತವ್ಯ. ಈ ಕ್ರಾಂತಿಯ ಭಾಗವಾಗಿ ಈ ಘಟ್ಟದಲ್ಲಿ ಬಂಡವಾಳಶಾಹಿಯನ್ನು ನಿರ್ಮೂಲ ಮಾಡಲು ಹೋಗುವುದಿಲ್ಲ. ಬಂಡವಾಳ ಶಾಹಿಯ ಬೆಳವಣಿಗೆಯನ್ನೇ ತಡೆಗಟ್ಟುವ ಪರಂಪರೆಯ ಅವಶೇಷಗಳು, ಹಾಗೂ ಪಾಳೇಗಾರಿ ಪ್ರಭಾವದ ಅವಶೇಷಗಳನ್ನು ನಿರ್ಮೂಲನ ಮಾಡಲಿಕ್ಕಷ್ಟೆ ಈ ಘಟ್ಟದಲ್ಲಿ ಕಾರ್ಮಿಕ ವರ್ಗದ ಕ್ರಾಂತಿಕಾರಿಗಳು ಶ್ರಮಿಸುವುದು. ಈ ಕ್ರಾಂತಿಯು ಪ್ರಗತಿಗೊಂಡು ಸಮಾಜವಾದಿ ಸಮಾಜವನ್ನು ಸ್ಥಾಪನೆ ಮಾಡಲು ಬೇಕಾದ ಪರಿಸ್ಥಿತಿಯು ಬೆಳೆದು ಬರುವಾಗಲೇ ಈ ಕ್ರಾಂತಿಯ ಮುಂದಿನ ಘಟ್ಟ ಪ್ರಾರಂಭವಾಗುವುದು. ಆಗ ಮಾತ್ರ ಸಮಾಜವಾದವನ್ನು ಸ್ಥಾಪನೆ ಮಾಡುವುದು ತಕ್ಷಣದ ಕರ್ತವ್ಯವಾಗಿ ಪರಿಣಮಿಸುತ್ತದೆ.

ಕೊನೆಯದಾಗಿ ; ಈ ಕರ್ತವ್ಯಗಳನ್ನು ಪೂರೈಸಬೇಕಾದರೆ ಕಮ್ಯೂನಿಸ್ಟ್ ಪಕ್ಷ ಒಂದು ನಿಜವಾದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷವಾಗಿ ಬೆಳೆಯಬೇಕು. ಕಾರ್ಮಿಕ ವರ್ಗವನ್ನು ಮುಖ್ಯ ಆಧಾರವಾಗಿಟ್ಟು ಅದರಿಂದ ಬೆಳೆದು ಬರುವ ಅತ್ಯಂತ ನಿಷ್ಠಾವಂತ ಕಾರ್ಯಕರ್ತರನ್ನು ಪಕ್ಷದ ಸದಸ್ಯರನ್ನಾಗಿ ಮಾಡಿ ಇತರ ವರ್ಗಗಳಿಂದ ಬೆಳೆದು ಬರುವ ಕ್ರಾಂತಿಕಾರಿಗಳನ್ನು ಕಾರ್ಮಿಕ ವರ್ಗದ ಕ್ರಾಂತಿಕಾರಿಗಳನ್ನಾಗಿ ಮಾಡಿ ಪಕ್ಷವನ್ನು ಕಟ್ಟಬೇಕು.

ಯುದ್ಧವಿಲ್ಲದ ಜಗತ್ತು ಸಮಾಜವಾದದ ಗುರಿ

—ಸ್ವೆತೊಸ್ಲಾವ್ ಕೊಜ್ಲೋವ್

ವಿವಾದಾತ್ಮಕವಾದ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಬಲಪ್ರಯೋಗದ ಮೂಲಕ ಬಗೆಹರಿಸಬೇಕೆನ್ನುವುದನ್ನು ಸೋವಿಯೆತ್ ಜನತೆ ಖಡಾಖಂಡಿತವಾಗಿ ವಿರೋಧಿಸುತ್ತಿದ್ದಾರೆ. ಅದೇ ಸಂದರ್ಭದಲ್ಲಿ ಅವರು ಶಾಂತಿಗಾಗಿ ಪ್ರಾಮಾಣಿಕವಾಗಿ ರಚನಾತ್ಮಕವಾಗಿ ಕಾರ್ಯಕ್ಕೆಗೊಳ್ಳುವ ಎಲ್ಲ ಸರಕಾರಗಳೊಂದಿಗೆ, ಸಾರ್ವಜನಿಕ ಸಂಸ್ಥೆಗಳೊಂದಿಗೆ ಸಹಕರಿಸಲೂ ಬಯಸುತ್ತಾರೆ. ನಮ್ಮ ರಾಷ್ಟ್ರ ವಿಭಿನ್ನ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರಗಳೊಂದಿಗೆ ಅನುಸರಿಸುತ್ತಿರುವ ಶಾಂತಿಯುತ ಸಹಬಾಳ್ವೆಯ ಲೆನಿನ್‌ವಾದಿ ತತ್ವಗಳ ಮೂಲ ಸತ್ವ ಇದೇ ಆಗಿದೆ.

ಇಂದು ನ್ಯೂಕ್ಲಿಯರ್ ಆಯುಧಗಳು ಹಾಗೂ ಅಸಾಧಾರಣ ಶಕ್ತಿಯ ಕ್ಷಿಪಣಿಗಳ ಯುಗದಲ್ಲಿ ಸಾಮ್ರಾಜ್ಯಶಾಹಿ ಆಕ್ರಮಣಕಾರಿ ಶಕ್ತಿಗಳ ಹೇಡಿ ಹಾಗೂ ದುಸ್ಸಾಹಸ ಕೃತ್ಯಗಳಿಂದಾಗಿ ಸಮಗ್ರ ಮಾನವಕುಲ ಅತ್ಯಂತ ಅಪಾಯಕಾರಿ ಬೆದರಿಕೆಯನ್ನು ಎದುರಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಶಾಂತಿಯುತ ಸಹಬಾಳ್ವೆಯ ಲೆನಿನ್‌ವಾದಿ ತತ್ವಗಳ ಕಟ್ಟುನಿಟ್ಟಾದ ಅನುಸರಣೆ ಹಿಂದೆಂದಿಗಿಂತಲೂ ಇಂದು ಅವಶ್ಯಕವಾಗಿದೆ.

ಸಾಮ್ರಾಜ್ಯಶಾಹಿ ಮತ್ತು ಸಮಾಜವಾದಿ ಶಕ್ತಿಗಳ ನಡುವೆ ಮಿಲಿಟರಿ ಮತ್ತು ವ್ಯೂಹಾತ್ಮಕ ಸಮಬಲ ನಿಸ್ಸಂದೇಹವಾಗಿಯೂ ಅಂತರರಾಷ್ಟ್ರೀಯ ಭದ್ರತೆ ಮತ್ತು ಶಾಂತಿಯನ್ನು ಖಾತ್ರಿಗೊಳಿಸುವ ಪ್ರಧಾನ ಘಟಕವಾಗಿದೆ. ಸಮಾಜವಾದಿ ರಾಷ್ಟ್ರಗಳ ಸಮುದಾಯ ಮಿಲಿಟರಿ ಮೇಲುಗೈ ಪಡೆಯಲು ಆಶಿಸುತ್ತಿಲ್ಲ. ಅವು ಯಾರ ವಿರುದ್ಧವೂ ಧಾಳಿ ಎಸಗಲು ತಮ್ಮ ಸಂಕಲ್ಪಗಳನ್ನು ಹೇರಲು ಆಶಿಸುತ್ತಿಲ್ಲ. "ಆದರೆ ಸದ್ಯ ಕೈಗೂಡಿರುವ ಮಿಲಿಟರಿ ಸಮಬಲವನ್ನು ವ್ಯತ್ಯಸ್ತಗೊಳಿಸಲು ನಾವು ಅಸ್ಪದ ನೀಡಲಾರೆವು" ಎಂದು ಸಿ.ಪಿ.ಎಸ್.ಯು ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೊನ್‌ಸ್ತಾಂತಿನ್ ಚೆರ್ನೆಂಕೋ ಅವರು ಇತ್ತೀಚೆಗೆ ಘೋಷಿಸಿದ್ದರು.

ಸೋವಿಯೆತ್ ಒಕ್ಕೂಟ ತನ್ನ ಹಾಗೂ ತನ್ನ ಮಿತ್ರರಾಷ್ಟ್ರಗಳ ಭದ್ರತೆಯನ್ನು ಬಲಪಡಿಸಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳುವುದರೊಂದಿಗೆ, ಮಾನವಕುಲ ಎದುರಿಸುತ್ತಿರುವ ಯುದ್ಧದ ಅಪಾಯವನ್ನು ತೊಲಗಿಸಲು ಹಾಗೂ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಸುಧಾರಿಸುವ ದಿಸೆಯಲ್ಲಿ ನಡೆಸಲಾಗುವ ಪ್ರಯತ್ನಗಳನ್ನೂ ಅದು ತ್ಯಜಿಸಲಾರದು ಎಂದು ಅವರು ಒತ್ತುಕೊಟ್ಟು ಹೇಳಿದ್ದರು.

"ನಮ್ಮ ರಾಷ್ಟ್ರವು ಮೂಲಭೂತ ಪ್ರಾಧಾನ್ಯತೆಯುಳ್ಳ ಅನೇಕ ಪ್ರಮುಖ ಉಪಕ್ರಮಗಳನ್ನು ರೂಪಿಸಿದೆ. ಶಾಂತಿಯನ್ನು ಬಲಪಡಿಸುವುದೇ ಅವುಗಳ ಜೀವಾಳವಾಗಿದೆ" ಎಂದು ಸೋವಿಯೆತ್ ವಿದೇಶಾಂಗ ಸಚಿವ ಆಂದ್ರೆಯಿ ಗ್ರೊಮಿಕೋ ಅವರು ಸೋವಿಯೆತ್ ಧುರೀಣ ಯೂರಿ ಆಂದ್ರೊಪೊವ್ ಅವರ ಅಂತ್ಯಕ್ರಿಯೆ ಸಭೆಯಲ್ಲಿ ಮಾತನಾಡುತ್ತಾ ಹೇಳಿದ್ದರು.

ಪಶ್ಚಿಮದ ರಾಷ್ಟ್ರಗಳೂ ಶಾಂತಿ ಸ್ಥಾಪನೆಗಾಗಿ ಇದೇ ರೀತಿ ಪ್ರಾಮಾಣಿಕ ಪ್ರಯತ್ನ ನಡೆಸಿದರೆ ಶಾಂತಿಯ ಪಥದಲ್ಲಿ ಬಹಳಷ್ಟು ಪ್ರಗತಿ ಸಾಧಿಸಲು ಸಾಧ್ಯವಿದೆ ಎಂದು ಯಾವತ್ತೂ ಶಾಂತಿಪ್ರಿಯ ನೀತಿಯನ್ನು ನಿಷ್ಠೆಯಿಂದ ಅನುಸರಿಸುತ್ತಾ ಬಂದಿರುವ ಸೋವಿಯೆತ್ ಒಕ್ಕೂಟ ಪರಿಭಾವಿಸಿದೆ.

ಕೃಪೆ : ಸೋವಿಯೆತ್ ಲೇಖನಮಾಲೆ

ಅಂತರಕಾಲೇಜು ಚರ್ಚಾ ಮತ್ತು ಭಾಷಣ ಸ್ಪರ್ಧೆಗಳು

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್.ಐ) ಬೆಂಗಳೂರು ನಗರ ಸಮಿತಿಯು ದಿನಾಂಕ 22-2-1984 ರಂದು ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಸಭಾಂಗಣದಲ್ಲಿ ಕಾ|| ಲಾಲ್ ಬಹದ್ದೂರ್ ರಾಯ್ ಸ್ಮಾರಕ ಚರ್ಚಾ ಸ್ಪರ್ಧೆ ಮತ್ತು ಕಾ|| ಚಂದ್ರಶೇಖರ್ ಸ್ಮಾರಕ ಭಾಷಣ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿತು. ಚರ್ಚಾಸ್ಪರ್ಧೆಯ ವಿಷಯ: ಮಾತೃಭಾಷೆಯೇ ಶಿಕ್ಷಣದ ಅತ್ಯುತ್ತಮ ಮಾಧ್ಯಮ. ಭಾಷಣ ಸ್ಪರ್ಧೆ ವಿಷಯ "ಜಾತಿ ಪದ್ಧತಿ ಮತ್ತು ಅಂತರ ಜಾತಿ ವಿವಾಹ." ಪ್ರಾರಂಭದಲ್ಲಿ ಬೆಂಗಳೂರು ನಗರ ಸಮಿತಿ ಕಾರ್ಯದರ್ಶಿ ಕಾ|| ಎಂ. ಎಚ್. ಶ್ರೀಧರಮೂರ್ತಿಯವರು ಸ್ವಾಗತಿಸಿದರು. ಕರ್ನಾಟಕ ರಾಜ್ಯ ಸಮಿತಿಉಪಾಧ್ಯಕ್ಷರಾದ ಎನ್.ರಾಜಣ್ಣನವರು ಉದ್ಘಾಟಿಸಿ ಮಾತನಾಡುತ್ತಾ ಎಸ್ ಎಫ್. ಐ. ಸಂಘಟನೆಯು ಬೆಳೆದು ಬಂದ ದಾರಿಯನ್ನು ವಿವರಿಸಿ, ಕಳೆದ ಸ್ವಾತಂತ್ರ್ಯ ಪೂರ್ವದಿಂದಲೂ ದೇಶದ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳಾದ ಅನಕ್ಷರತೆ, ಉಚಿತ ಕಡ್ಡಾಯ ಶಿಕ್ಷಣ, ಶಿಕ್ಷಣ ಪದ್ಧತಿಯ ಆಮೂಲಾಗ್ರವಾದ ಬದಲಾವಣೆಯ ಅಗತ್ಯ ಕುರಿತು; ವಿದ್ಯಾರ್ಥಿಗಳ ಹಕ್ಕುಗಳನ್ನು ಕಿತ್ತುಕೊಳ್ಳುವ ಯು. ಜಿ. ಸಿ. ಯ ಅಧ್ಯಕ್ಷರಾದ ಮಾಥುರ್‌ರವರ ಪ್ರಯತ್ನಗಳು, ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಿರುವುದರ ಕುರಿತು, ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ಉಂಟು ಮಾಡುತ್ತಿರುವ ಛಿದ್ರಕಾರಿ, ಪ್ರತ್ಯೇಕತಾವಾದಿಗಳ ಕುರಿತು, ಯುದ್ಧವಿರೋಧಿ ಶಾಂತಿ ಚಳುವಳಿಗಳ ಕುರಿತು ತಿಳಿಸಿದರು

ಸಭೆಯ ಅಧ್ಯಕ್ಷತೆಯನ್ನು ಬಂಡಾಯ ಸಾಹಿತಿಗಳು, ಪ್ರಗತಿಪರ ಚಿಂತಕರಾದ ಶ್ರೀ ಎಲ್. ಹನುಮಂತಯ್ಯನವರು ವಹಿಸಿದ್ದರು. ಸಮಾರಂಭಕ್ಕೆ ಶ್ರೀ ಟಿ. ವೆಂಕಟೇಶಮೂರ್ತಿ ಬೆಂಗಳೂರು ವಿಶ್ವವಿದ್ಯಾಲಯ ಅಧ್ಯಾಪಕರ ಸಂಘದ ಕಾರ್ಯದರ್ಶಿಯವರು ಹಾಗೂ ಲಂಕೇಶ್ ಪತ್ರಿಕೆಯ ವರದಿಗಾರ ಮತ್ತು ಬಂಡಾಯ ಸಾಹಿತಿ ಶ್ರೀ ದ್ವಾರಕನಾಥರವರು ಮುಖ್ಯ ಅತಿಥಿಗಳಾಗಿದ್ದರು. ಸಮಾರಂಭದ ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀ ಬೆಸಕನಹಳ್ಳಿ ನಾಯಕ್ (ಬಿ. ಎನ್. ಎಂ. ಕಾಲೇಜು ಅಧ್ಯಾಪಕರು) ಗುಡಿಹಳ್ಳಿ ನಾಗರಾಜು (ಪ್ರಜಾವಾಣಿ ಉಪಸಂಪಾದಕರು)

[8ನೇ ಪುಟ ನೋಡಿ]

ಪಂಜಾಬ್ ಪರಿಸ್ಥಿತಿ

ಸಂಕುಚಿತ ಹಿತಾಸಕ್ತಿ ಬದಿಗಿಟ್ಟು ಸಮಸ್ಯೆ ಬಗೆಹರಿಸಿ

—ಕಾಂ. ಸುರಜೀತ್

"ಕೋಮುವಾರು ಧೃವೀಕರಣ ನಡೆಯುತ್ತಿದೆ. ನೀವು ನಿರಾತಂಕವಾಗಿದ್ದೀರಿ. ನನಗೆ 1947 ರ ನೆನಪು ಬರುತ್ತಿದೆ. ಇದನ್ನು ಹಲವು ಬಾರಿ ಈ ಸದನದಲ್ಲಿ ಹೇಳಿದ್ದೇನೆ. ಈ ಕ್ಷೇತ್ರದಲ್ಲಿ ಈಗಿನ ಪರಿಸ್ಥಿತಿ 1947 ರ ಆಗಸ್ಟ್ ತಿಂಗಳಿಗೆ ಮುನ್ನ ಇದ್ದ ಸ್ಥಿತಿಯಂತಿದೆ. ಹಿಂದೂ ಮತ್ತು ಸಿಖ್ ತೀವ್ರಗಾಮಿಗಳಿಬ್ಬರೂ ಶಸ್ತ್ರಾಸ್ತ್ರ ಸಂಗ್ರಹಿಸುತ್ತಿದ್ದಾರೆ. ನಿಮ್ಮ ಗುಪ್ತಚಾರ ಸಂಘಟನೆ ಎಲ್ಲಿ ಹೋಗಿದೆಯೋ ನನಗೆ ತಿಳಿಯುತ್ತಿಲ್ಲ. ಪಟ್ಟಣಗಳಲ್ಲಿ, ನಗರಗಳಲ್ಲಿ ಹಲವೆಡೆ ವಿಪುಲ ಶಸ್ತ್ರಾಸ್ತ್ರ ಸಂಗ್ರಹವಿದೆ. ಗಡಿ ತೆರೆದಿದೆ. ಪಾಕಿಸ್ತಾನ ಸುಮ್ಮನೆ ಕೂತಿಲ್ಲ. ನೀವು ಹೇಳಬಹುದು- ಹಳ್ಳಿಗಳಲ್ಲಿ ದೊಂಬಿಗಳಾಗಿಲ್ಲ ಎಂದು. ಸರಿ. ಆದರೆ ಹೃದಯದಾಳದಲ್ಲಿ ಈಗ ಪ್ರತಿಯೊಬ್ಬ ವ್ಯಕ್ತಿ ಹಿಂದೂ ಆಗಿದ್ದಾನೆ ಅಥವಾ ಸಿಖ್ಖನಾಗಿದ್ದಾನೆ. ಯಾರೂ ಪಂಜಾಬಿಗಳಾಗಿಲ್ಲ, ಹಿಂದೂಸ್ತಾನಿಗಳಾಗಿ, ಭಾರತೀಯರಾಗಿ ಉಳಿದಿಲ್ಲ. ಈ ವಿಷ ಹೆಚ್ಚಿನವರನ್ನು ತಟ್ಟಿದೆ. ಕೆಲವರನ್ನಷ್ಟೆ ಇದು ತಟ್ಟಿಲ್ಲ. ಆದ್ದರಿಂದಲೇ ನಾನು ಹೇಳುತ್ತಿರುವುದು – ನೀವು ಅಲ್ಲಿಯ ವಾಸ್ತವ ಸ್ಥಿತಿಯನ್ನು ಕಣ್ಣು ತೆರೆದು ಈಗಲೂ ನೋಡುತ್ತಿಲ್ಲ. ಕಳೆದ ಎರಡೂವರೆ ವರ್ಷಗಳು ನೀವು ಈ ಎಚ್ಚರಿಕೆಯತ್ತ ಲಕ್ಷ್ಯ ಹರಿಸಲಿಲ್ಲ. ಈಗಲೂ ಗಮನ ಹರಿಸುತ್ತಿಲ್ಲ"

ಪಂಜಾಬ್, ಹರಿಯಾಣಾದ ಪರಿಸ್ಥಿತಿಯ ಬಗ್ಗೆ ಗೃಹ ವ್ಯವಹಾರಗಳ ರಾಜ್ಯ ಮಂತ್ರಿಯವರು ರಾಜ್ಯ ಸಭೆಯಲ್ಲಿ ಫೆಬ್ರುವರಿ 28 ರಂದು ನೀಡಿದ ಹೇಳಿಕೆಯ ಕುರಿತು ಮಾತನಾಡುತ್ತಾ ರಾಜ್ಯ ಸಭೆಯಲ್ಲಿ ಸಿ. ಪಿ. ಐ. (ಎಂ) ಗುಂಪಿನ ನಾಯಕ ಕಾಂ. ಹರಿಕಿಷನ್ ಸಿಂಗ್ ಸುರಜೀತ್ ಕೇಂದ್ರ ಸರಕಾರವನ್ನು ತರಾಟೆಗೆ ತಗೊಂಡು ಹೇಳಿದ ಮಾತುಗಳಿವು. ಇದಕ್ಕೆ ಮೊದಲು ಹರ್‍ಯಾಣಾದಲ್ಲಿ ಫೆಬ್ರವರಿ 14 ರಿಂದ 20 ರ ವರೆಗೆ ನಡೆದ ಘಟನೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ "ಇದು ಇದ್ದಕ್ಕಿದ್ದಂತೆ ನಡೆದ ಘಟನೆ" ಎಂಬ ಸರಕಾರದ ಹೇಳಿಕೆ ಬೇಜವಾಬ್ದಾರಿತನವೆಂದು ಟೀಕಿಸಿದರು. ಯಾಕೆಂದರೆ ಫೆಬ್ರವರಿ 13 ರಂದಷ್ಟೇ ಹರಿಯಾಣಾದ ಹಿಂದೂಗಳು, ಸಿಖ್ಖರು ಎಲ್ಲಾ ಒಂದಾಗಿ ಮತಪ್ರದರ್ಶನ ನಡೆಸಿದ್ದರು. ವಾಸ್ತವವಾಗಿ ಫೆಬ್ರವರಿ 14 ರಿಂದ 20 ರವರೆಗೆ ಹರಿಯಾಣಾದಲ್ಲಿ ನಡೆದ ಘಟನೆಗಳು ವ್ಯವಸ್ಥಿತವಾಗಿ, ಪೂರ್ವ ಯೋಜಿತವಾಗಿ ನಡೆದಿದೆಯೆಂಬುದನ್ನು ಪಾಣೀಪತ ಮತ್ತು ಕರ್ನಾಲ್‌ಗೆ ಭೇಟಿಯಿತ್ತ ಸಿ. ಪಿ. ಐ (ಎಂ) ಸಂಸತ್ ಸದಸ್ಯರುಗಳಾದ ಸತ್ಯಸಾಧನ್ ಚಕ್ರವರ್ತಿ, ಸುಕೋಮಲ್ ಸೆನ್, ಕೆ. ಮೋಹನನ್ ಹಾಗೂ ಸುಧೀರ್ ಗಿರಿ ಕಣ್ಣಾರೆ ಕಂಡಿದ್ದಾರೆ. ಅಧಿಕಾರಿಗಳು ಮತ್ತು ಪೋಲೀಸರು ಕೈಮಿಲಾಯಿಸಿರದಿದ್ದರೆ ಇಂತಹ ಭಯಾನಕ ಲೂಟಿ, ಕೊಲೆಗಳು ನಡೆಯುತ್ತಿರಲಿಲ್ಲ ಎಂದು ಭೇಟಿಯ ನಂತರ ತಮಗನಿಸಿತೆಂದು ಈ ಸಂಸತ್ ಸದಸ್ಯರು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ. ಇಷ್ಟೇ ಅಲ್ಲ, ಕೆಲವು ಪ್ರಮುಖ ರಾಜಕೀಯ ಪಕ್ಷಗಳ ನಾಯಕರುಗಳ ಕೈವಾಡ ಕೂಡಾ ಇದರಲ್ಲಿತ್ತು ಎಂದು ಜನ ದೂರುತ್ತಿದ್ದಾರೆ. ಆದ್ದರಿಂದಲೇ ಈ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡುತ್ತಾ ಸುರಜೀತ್ "ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಬೆಸೆದ ಭ್ರಾತೃತ್ವ ನಿಮ್ಮ ಕಣ್ಣೆದುರೇ ಸಡಿಲಗೊಳ್ಳುತ್ತಿದೆ. ಆದರೂ ನಿಮಗೆ ಅದರ ಪರಿವೆಯಿಲ್ಲ. ನಿಮ್ಮ ದೃಷ್ಟಿಯಲ್ಲಿ, ನಿಮ್ಮ ಪಕ್ಷದ ದೃಷ್ಟಿಯಲ್ಲಿ ಏನಿದೆಯೋ ನನಗೆ ಗೊತ್ತಾಗುತ್ತಿಲ್ಲ. ದೇಶ ಅಪಾಯದಲ್ಲಿರುವಾಗ, ಮಾನವೀಯ ಮೌಲ್ಯಗಳು ಕಾಣೆಯಾಗುತ್ತಿರುವಾಗ ಪಕ್ಷ ಇಟ್ಟುಕೊಂಡು, ಅದರ ಪ್ರಭಾವ ಮತ್ತು ಒಂದಿಷ್ಟು ಓಟು ಇಟ್ಟುಕೊಂಡು ಏನು ಮಾಡುತ್ತೀರಿ ?" ಎಂದು ಮೊನಚಾಗಿ ಪ್ರಶ್ನಿಸಿದರು.

ಉಲ್ಬಣಗೊಳಿಸಬೇಡಿ

ಅಕಾಲೀ ನಾಯಕರ ಬಗ್ಗೆ ಹೇಳುತ್ತಾ ಸಿಖ್ ತೀವ್ರಗಾಮಿಗಳು ನಡೆಸುತ್ತಿರುವ ಕೊಲೆ, ಸುಲಿಗೆ, ದರೋಡೆ ಇತ್ಯಾದಿ ಚಟುವಟಿಕೆಗಳಿಂದ ಖಲಿಸ್ತಾನದ ಅವರ ಬೇಡಿಕೆಗಳಿಗೂ ತಮಗೂ ಸಂಬಂಧವಿಲ್ಲವೆಂದು ಹೇಳಿಕೊಂಡು ಬಂದಿರುವರಾದರೂ 'ಗುರುದ್ವಾರಗಳಲ್ಲಿ ಇಷ್ಟೆಲ್ಲಾ ಮಾಡಿದ ಮೇಲೂ ತೀವ್ರಗಾಮಿಗಳಿಗೆ ಏಕೆ ಆಶ್ರಯ ನೀಡಲಾಗುತ್ತಿದೆ ಎಂಬುದಕ್ಕೆ ಇತರರು ನಂಬಬಹುದಾದ ಉತ್ತರ ಕೊಡಲು ಅಕಾಲೀ ನಾಯಕರಿಗಾಗುತ್ತಿಲ್ಲ. ಗುರುದ್ವಾರಗಳಲ್ಲಿ ಪತ್ರಿಕಾ ಸಮ್ಮೇಳನ ನಡೆಸಿ ದೇವಸ್ಥಾನಗಳನ್ನು ಅಪವಿತ್ರಗೊಳಿಸುವ, ಖಲಿಸ್ತಾನದ ಧ್ವಜ ಹಾರಿಸುವ ಘೋಷಣೆ ಮಾಡುತ್ತಿರುವಾಗ ಗುರುದ್ವಾರ ಸ್ವಚ್ಛವಾಗಿದೆ ಎಂದು ಯಾರನ್ನೂ ಅವರು ನಂಬಲಾಗುತ್ತಿಲ್ಲ. ಯಾರು ತಾನೇ ಅವರನ್ನು ನಂಬಲು ಸಾಧ್ಯ. ಆದರೂ ಅವರು ಹಾಗೆ ಹೇಳುತ್ತಿದ್ದಾರೆ' ಎಂದು ಹೇಳಿದ ಕಾಂ. ಸುರಜೀತ್ ಅಕಾಲಿ ನಾಯಕರನ್ನು ಇತರರು ನಂಬುವಂತಾಗ ಬೇಕಾದರೆ ಇನ್ನೂ ಹೆಚ್ಚು ಕೆಲಸ ಮಾಡಬೇಕಾಗಿದೆ ಎಂದು ಸಲಹೆ ಮಾಡಿದರು. ಸಂವಿಧಾನದ 25ನೇ ಕಲಮನ್ನು ಸುಡುವ ಅಕಾಲಿ ನಾಯಕರ ನಿರ್ಧಾರದ ಬಗ್ಗೆ ಪ್ರಸ್ತಾಪಿಸುತ್ತಾ, ಕಳೆದ 37 ವರ್ಷಗಳಲ್ಲಿ ಈ ಬಗ್ಗೆ ಬರೆಯಲಿಲ್ಲ, ಹೇಳಲಿಲ್ಲ, ತಿದ್ದುಪಡಿ ತರಬೇಕೆಂದು ಕೇಳಲಿಲ್ಲ, ಈಗ ಇದ್ದಕ್ಕಿದ್ದಂತೆ ಬೆದರಿಕೆಯೊಡ್ಡಿ ಸಂವಿಧಾನವನ್ನು ಬದಲಿಸಲು ಸಾಧ್ಯವಿಲ್ಲ ಎಂದ ಅವರು ಈ ಕ್ರಮದ ಮೂಲಕ ಅಕಾಲಿ ನಾಯಕರು ಜನತೆಯಿಂದ ದೂರವಾಗುತ್ತಿದ್ದಾರೆ, ಅವರ ನಿಜವಾದ ಬೇಡಿಕೆಗಳಿಗೆ ಬೆಂಬಲ ನೀಡುತ್ತಿರುವವರ ಸಹಾನುಭೂತಿಯನ್ನು ಕಳಕೊಳ್ಳುತ್ತಿದ್ದಾರೆ ಎಂದು ಎಚ್ಚರಿಸಿದರು.

27 ರಂದು ಬಿ. ಜೆ. ಪಿ.ಯ ಬಂದ್ ಕರೆ ಬಗ್ಗೆ ಹೇಳುತ್ತಾ ಸುರಜೀತ್ ಅವರು ಬಂದ್‌ನ ದಿನ ಏನೂ ದುರ್ಘಟನೆ ನಡೆಯದುದರ ಬಗ್ಗೆ ಸಂತಸ ವ್ಯಕ್ತಪಡಿಸಿದರೂ "ಈ ಸನ್ನಿವೇಶದಲ್ಲಿ ಯಾರೇ ಬಂದ್ ಅಥವಾ ಹರತಾಳ ನಡೆಸಿದರೂ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳುತ್ತದೆಯೆಂದು ಯಾರೂ ಯೋಚಿಸುವುದಿಲ್ಲ. ಜನರ ಮನಸ್ಸಿನಲ್ಲಿ ಪರಿಸ್ಥಿತಿಯನ್ನು ಉಲ್ಬಣಗೊಳಿಸಲಾಗುತ್ತಿದೆ. ನನಗೆ ಈ ಬಗ್ಗೆ ಭಯವಿದೆ. ಯಾಕೆಂದರೆ ಒಮ್ಮೆ ಈ ವಿಷ ವ್ಯಾಪಿಸಿತೆಂದರೆ ನಮ್ಮಲ್ಲಿ ಹೆಚ್ಚಿನವರು ಅದರ ಪ್ರಭಾವಕ್ಕೊಳಗಾಗುತ್ತಾರೆ. 1947 ರಲ್ಲಿ ಅಲ್ಪ ಸಂಖ್ಯಾತರ ಜೀವ ರಕ್ಷಣೆಗೆ ಎಷ್ಟು ಜನ ಉಳಿದಿದ್ದರೆಂಬುದು ನನಗೆ ಗೊತ್ತಿದೆ. ಯಾಕೆಂದರೆ ಭಾವೋದ್ರೇಕ ಹರಡಿರುವಾಗ ಜಾತ್ಯತೀತತೆಯ ಬಾವುಟ ಎತ್ತಿ ಹಿಡಿಯಲು ಅಲ್ಪಸಂಖ್ಯಾತರ ರಕ್ಷಣೆಗೆ ನಿಲ್ಲುವವರು ಅತೀ ಕಮ್ಮಿ ಜನ" ಎಂದು ಎಚ್ಚರಿಸಿದರು.

ಮಂದಗತಿಯ ನಿಲುಮೆ

ಆದರೆ ಸಮಸ್ಯೆ ಕಳೆದ ಎರಡು ವರ್ಷಗಳಲ್ಲಿ ಉಲ್ಬಣಗೊಂಡು ಈಗಿನ ಆತಂಕಕಾರಿ ಮಟ್ಟ ತಲುಪಲು ಕೇಂದ್ರ ಸರಕಾರದ ಉದಾಸೀನಭಾವವೇ ಮುಖ್ಯ ಕಾರಣ ಎಂದು ಕಾಂ. ಸುರಜೀತ್ ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು. "ಪಂಜಾಬಿನಲ್ಲಿ ಕಳೆದ ಎರಡೂವರೆ ವರ್ಷಗಳಿಂದ ನಡೆಯುತ್ತಿರುವ ತೀವ್ರಗಾಮಿ ಚಟುವಟಿಕೆಗಳಲ್ಲಿ ಭಾಗವಹಿಸಿದ ಹಲವರು ಬಂಧನಕ್ಕೊಳಗಾಗಿದ್ದಾರೆ. ಅವರು ಪೋಲೀಸರ ಮುಂದೆ ಕೊಟ್ಟ ಹೇಳಿಕೆಗಳಿವೆ. ಅವನ್ನೆಲ್ಲಾ ಏಕೆ ಪ್ರಕಟಿಸುವುದಿಲ್ಲ ? ಈ ಎಲ್ಲದರ ಬಗ್ಗೆ ಶ್ವೇತ ಪತ್ರ ಹೊರಡಿಸಿ ಎಂದು ನಾವು ಕೇಳುತ್ತಲೇ ಇದ್ದೇವೆ. ಅದನ್ನೇಕೆ ಮಾಡುವುದಿಲ್ಲ ? ಆ ಮೂಲಕ ಆಡಳಿತಾತ್ಮಕ ಕ್ರಮಗಳೊಂದಿಗೆ ಈ ಸಮಾಜ ವಿರೋಧಿ ಶಕ್ತಿಗಳ ವಿರುದ್ಧ ಜನತೆಯ ಅಭಿಪ್ರಾಯ ಮೂಡಿಸುವ ರಾಜಕೀಯ ಸಿದ್ಧತೆ ಸಾಧ್ಯ. ಯಾಕೆಂದರೆ ಕೆಲವು ಹಳ್ಳಿಗಳಲ್ಲಿ ಜನರೇ ಇಂತಹ ಸಮಾಜ ಘಾತಕ ಶಕ್ತಿಗಳನ್ನು ಪೋಲೀಸರಿಗೆ ಕೊಟ್ಟಿರುವ ಉದಾಹರಣೆಗಳಿವೆ" ಎಂದು ಸುರಜಿತ್ ತಮ್ಮ ಭಾಷಣದಲ್ಲಿ ತಿಳಿಸಿದರು.

ಕೇಂದ್ರ ಸರಕಾರವು ವಿರೋಧ ಪಕ್ಷಗಳನ್ನು ದೂರುತ್ತಿರುವುದನ್ನು ಪ್ರಸ್ತಾಪಿಸುತ್ತಾ ವಾಸ್ತವವಾಗಿ ಪಂಜಾಬ್ ಪರಿಸ್ಥಿತಿಗೆ ಸಂಬಂಧಪಟ್ಟಂತೆ ವಿರೋಧ ಪಕ್ಷಗಳು ಸರಕಾರಕ್ಕೆ ನೆರವಾಗಲು ಪ್ರಯತ್ನಿಸುತ್ತಿರುವುದರ ಬಗ್ಗೆ ಸರಕಾರ ಅವರಿಗೆ ಕೃತಜ್ಞವಾಗಿರಬೇಕು ಎಂದು ಕಾಂ ಸುರಜೀತ್ ಅಭಿಪ್ರಾಯ ಪಟ್ಟರು. —"ಅವರು ಅಕಾಲಿಗಳನ್ನು ಮಾತುಕತೆಗೆ ಬರುವಂತೆ ಮಾಡಿದರು. ಆದರೆ ಅದರ ಶ್ರೇಯಸ್ಸು ನೀವು ಪಡೆಯ ಬಯಸುತ್ತೀರಿ." ಇತ್ತೀಚಿನ ತ್ರಿಪಕ್ಷೀಯ ಮಾತುಕತೆಯ ಬಗ್ಗೆ ಮಾತ್ರವಲ್ಲ, ಕಳೆದ ವರ್ಷ ಜೂನ್‌ನಲ್ಲಿ ವಿರೋಧ ಪಕ್ಷಗಳು ಒಂದು ಸೂತ್ರವನ್ನು ಸೂಚಿಸಿ ಅದಕ್ಕೆ ಅಕಾಲಿದಳವನ್ನು ಬದ್ಧಗೊಳಿಸಿದುದನ್ನು ಕಾಂ ಸುರಜಿತ್ ಗೃಹಮಂತ್ರಿಗಳಿಗೆ ಜ್ಞಾಪಿಸಿಕೊಡುತ್ತಾ "ಮಾತುಕತೆ ನಡೆಸಿದ ಶ್ರೇಯಸ್ಸು ನಿಮಗೇ ಬೇಕೆಂದಿದ್ದರೆ ಅದನ್ನು ಧಾರಾಳವಾಗಿ ಕೊಡಲು ಸಿದ್ಧರಿದ್ದೇವೆ. ಬೇಕಾದರೆ ದೂಷಣೆ ನಮಗಿರಲಿ ನೀವು ಮೊದಲು ಸಮಸ್ಯೆ ಬಗೆಹರಿಸಿ. ಯಾಕೆಂದರೆ ಹಿಂದೂಗಳು ಸಿಖ್ಖರು ಹೊಡೆದಾಡುವುದನ್ನ ನೋಡಲು ನಮ್ಮಿಂದ ಸಾಧ್ಯವಿಲ್ಲ.

(8ನೇ ಪುಟ ನೋಡಿ)

ಪಾಲಿಟ್‌ಬ್ಯೂರೋ ಕರೆ :

ಕೋಮು ದ್ವೇಷ ಹಬ್ಬಿಸುವ ಪ್ರಯತ್ನಗಳನ್ನು ವಿಫಲಗೊಳಿಸಿ

ಫೆಬ್ರವರಿ 25 ರಂದು ಸಿ. ಪಿ. ಐ. (ಎಂ) ನ ಪಾಲಿಟ್ ಬ್ಯೂರೋ ಈ ಕೆಳಗಿನ ಪತ್ರಿಕಾ ಹೇಳಿಕೆ ನೀಡಿದೆ.

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಸಂಸತ್ತಿನಲ್ಲಿ ಪಂಜಾಬ್ ಪರಿಸ್ಥಿತಿಯನ್ನು ಚರ್ಚಿಸಲು ಸರಕಾರ ನಿರಾಕರಿಸುವುದನ್ನು ಕ್ರಿಮಿನಲ್ ಬೇಜವಾಬ್ದಾರಿತನ ಎಂದು ಪರಿಗಣಿಸುತ್ತದೆ. ಹರ್‍ಯಾಣಾದಲ್ಲಿ ಭುಗಿಲ್ಲೆಂದ ಉದ್ರೇಕ ಮತ್ತು ಪಂಜಾಬಿನಲ್ಲಿ ಮೇಲಿಂದ ಮೇಲೆ ನಡೆಯುತ್ತಿರುವ ಕೊಲೆಪಾತಕತನ ಪರಿಸ್ಥಿತಿ ಹತೋಟಿ ಮೀರಿ ಹೋಗಿದೆ, ಅದನ್ನು ಸಾಮಾನ್ಯ ಸ್ಥಿತಿಗೆ ತರಬೇಕಾದರೆ ಸರಕಾರದ ಧೋರಣೆ ಬದಲಾಗಿ ಒಂದು ಸರ್ವಸಮ್ಮತ ಸೂತ್ರವನ್ನು ರೂಪಿಸಬೇಕು ಎಂಬ ಎಚ್ಚರಿಕೆ ನೀಡುತ್ತಿದೆ.

ಎಲ್ಲೇ ಆಗಲಿ, ಹಿಂದೂಗಳಾಗಲಿ, ಸಿಖ್ಖರಾಗಲಿ ಪಾಷಂಡಿಗಳನ್ನು ಹುತಾತ್ಮರೆಂದು ಕಂಡರೆ ದೇಶದ ಹಿತಾಸಕ್ತಿಗಳಿಗೆ ಸರಿಪಡಿಸಲಾಗದ ಧಕ್ಕೆ ಒದಗುತ್ತದೆ ಎಂದು ಪಾಲಿಟ್‌ಬ್ಯೂರೋ ಜನತೆಗೆ ಎಚ್ಚರಿಕೆ ನೀಡುತ್ತದೆ. ಪಂಜಾಬಿನಲ್ಲಿ ಮತ್ತು ಈಗ ಹರ್‍ಯಾಣದ ಹಿಂಸಾಕಾಂಡಗಳನ್ನು ಖಂಡಿಸುತ್ತಾ ಪಾಲಿಟ್‌ಬ್ಯೂರೋ ಶಾಂತಿ ಕಾಪಾಡಬೇಕೆಂದು, ತಮ್ಮ ಭಾವನೆಗಳನ್ನು ದುರುಪಯೋಗಪಡಿಸಿಕೊಂಡು ಒಬ್ಬ ಭಾರತೀಯನನ್ನು ಇನ್ನೊಬ್ಬನ ವಿರುದ್ಧ ಎತ್ತಿ ಕಟ್ಟುವವರನ್ನು ಧಿಕ್ಕರಿಸಬೇಕೆಂದು ಜನತೆಗೆ ಕರೆನೀಡುತ್ತದೆ.

ಭಾವೋದ್ರೇಕ ಮತ್ತು ಪೂರ್ವಾಗ್ರಹಗಳಿಂದ ತುಂಬಿಹೋಗಿರುವ ಈ ವಾತಾವರಣದಲ್ಲಿ ಬಿ. ಜೆ. ಪಿ. ಕೊಟ್ಟಿರುವ ಬಂದ್ ಕರೆ ಕೋಮು ಪರಿಸ್ಥಿತಿಯನ್ನು ಉಲ್ಬಣಗೊಳಿಸಿ ದೇಶದ ಐಕ್ಯತೆಗೆ ಮಾರಕವಾಗುತ್ತದೆ ಎಂದು ಪಾಲಿಟ್‌ಬ್ಯೂರೋ ಭಾವಿಸುತ್ತದೆ. ಸಂವಿಧಾನವನ್ನು ಸುಡಬೇಕೆಂಬ ಅಕಾಲಿ ನಾಯಕರ ಯೋಜನೆಯ ಫಲಿತಾಂಶ ಕೂಡಾ ಇದೇ ಆಗಿದ್ದು ಅದು ಪರಿಸ್ಥಿತಿ ಹದಗೆಡಲು ಕುಮ್ಮಕ್ಕು ನೀಡುತ್ತದೆ ಎಂದು ಪಾಲಿಟ್‌ಬ್ಯೂರೋ ಅಭಿಪ್ರಾಯ ಪಡುತ್ತದೆ.

ಬಿ. ಜೆ. ಪಿ. ಹಾಗೂ ಅಕಾಲಿ ನಾಯಕರು ತಮ್ಮ ಯೋಜಿತ ಕ್ರಮಗಳನ್ನು ಬಿಟ್ಟು ಇತ್ತೀಚಿನ ಘಟನೆಗಳಿಂದ ಹರಡಿರುವ ಕಹಿಯನ್ನು ನಿವಾರಿಸುವಲ್ಲಿ ಇತರರ ಜತೆಗೂಡಬೇಕೆಂದು ಪಾಲಿಟ್‌ಬ್ಯೂರೋ ವಿನಂತಿಸಿಕೊಳ್ಳುತ್ತದೆ.

ದಿಲ್ಲಿಯ ನಾಗರಿಕರು, ಹಿಂದೂಗಳು, ಮುಸ್ಲಿಮರು ಮತ್ತು ಸಿಖ್ಖರು ತಮ್ಮ ಪಾರಂಪರಿಕ ಐಕ್ಯತೆಯನ್ನು ಕಾಪಾಡಬೇಕೆಂದು ಪಾಲಿಟ್‌ಬ್ಯೂರೋ ಕರೆನೀಡುತ್ತದೆ. ತಮ್ಮ ಐಕ್ಯತೆಯನ್ನು ಕಾಪಾಡಿಕೊಂಡು ಕೋಮುಗಲಭೆ ಉಂಟುಮಾಡುವವರ ಪ್ರಯತ್ನಗಳನ್ನು ವಿಫಲಗೊಳಿಸಬೇಕೆಂದು ಕಾರ್ಮಿಕರಿಗೆ ಪಾಲಿಟ್‌ಬ್ಯೂರೋ ಕರೆ ನೀಡುತ್ತದೆ.

—ಆರ್. ಚಂದ್ರ

ಆರ್ಥಿಕ ಸಮೀಕ್ಷೆ

ಚುನಾವಣಾ ಪೂರ್ವದ ರೈಲ್ವೇ ಮುಂಗಡ ಪತ್ರ

ಕೇಂದ್ರ ರೈಲ್ವೆ ಮಂತ್ರಿ, ಘನಿಖಾನ್ ಚೌಧುರಿಯವರು ಇಂದಿರಾಗಾಂಧಿ ಸರಕಾರದ ಕೊನೆಯ ವರ್ಷದ (1984-85) ರೈಲ್ವೆ ಮುಂಗಡ ಪತ್ರವನ್ನು ತಾ. 24-2-84 ರಂದು ಸಂಸತ್ತಿನಲ್ಲಿ ಮಂಡಿಸುವಾಗ, ರೈಲ್ವೆ ಸಾರಿಗೆ ಅಭಿವೃದ್ಧಿಗಿಂತ ಮುಂಬರುವ ಚುನಾವಣೆಯ ಮೇಲೆಯೇ ಹೆಚ್ಚು ಗಮನ ಇಟ್ಟಂತಿದೆ. ಮುಂಗಡ ಪತ್ರದಲ್ಲಿ ಮೇಲ್ನೋಟಕ್ಕೆ ಪ್ರಯಾಣ ದರಗಳಲ್ಲಿ ಏರಿಕೆ ಇಲ್ಲ. ಸರಕು ಸಾಮಗ್ರಿಗಳ ಸಾರಿಗೆ ದರಗಳಲ್ಲಿ ರಿಯಾಯತಿ, ಹೆಚ್ಚು ಆದಾಯ ಹಾಗೂ ಕಡಿಮೆ ಕೊರತೆ, ಇತ್ಯಾದಿ ಅಂಶಗಳನ್ನು ತೋರಿಸಿ ಜನಸಾಮಾನ್ಯರು ಸಮಾಧಾನದ ಉಸಿರು ಬಿಡುವಂತೆ ಪ್ರಯತ್ನಿಸಿದ್ದಾರೆ. ಹೊರ ಶೃಂಗಾರದ ಮುಂಗಡ ಪತ್ರದಿಂದ ಜನರ ಸರಕಾರಿ ವಿರೋಧ ಮನೋಭಾವವನ್ನು ಪರಿವರ್ತಿಸಿ ಮುಂಬರುವ ಚುನಾವಣೆಗೆ ಇಂದಿರಾ ಕಾಂಗ್ರೆಸ್‌ಗೆ ಓಟುಗಿಟ್ಟಿಸಿ ಪುನಃ ಅಧಿಕಾರಕ್ಕೆ ಬರುವ ಸಂಚು ಇಲ್ಲಿ ಕಂಡು ಬರುತ್ತದೆ!

ಘನಿಖಾನ್ ಚೌಧರಿಯವರು ತನ್ನ ತಾಯ್ನಾಡು ಬಂಗಾಳದಲ್ಲಿನ ಜನಪ್ರಿಯ ಎಡರಂಗ ಸರಕಾರವನ್ನು ಬಂಗಾಳ ಕೊಲ್ಲಿಗೆ ಎಸೆಯುವುದಾಗಿ ಹಿಂದೆ ಗುಡುಗಿದ್ದರು. ನಂತರ ಉಕ್ಕು ಮತ್ತು ಕಲ್ಲಿದ್ದಲು ಸರಬರಾಜಿನಲ್ಲಿ ಸ್ವಜನ ಪಕ್ಷಪಾತ ನಡೆಸಿದ್ದರೆಂಬ ಆಪಾದನೆಗೊಳಗಾಗಿದ್ದರು ತನ್ನ ಮನಸ್ಸಿಗೆ ಬಂದಂತೆ ರೈಲ್ವೆ ಅಧಿಕಾರಿಗಳನ್ನು ಬದಲಾಯಿಸುತ್ತಿದ್ದರು, ಆಡಳಿತದಲ್ಲಿ ಅನವಶ್ಯಕವಾಗಿ ಹಸ್ತಕ್ಷೇಪ ಮಾಡುತ್ತಿದ್ದರು. ಈಗ ಅವರ ರಾಜ್ಯದವರೇ ಆದ ಕೇಂದ್ರ ವಿತ್ತ ಮಂತ್ರಿ ಪ್ರಣಬ ಮುಖರ್ಜಿ ಮತ್ತಿತರರ ಗುಂಪುಗಳೊಡನೆ ಸ್ವಪಕ್ಷದಲ್ಲಿಯೇ ಪೈಪೋಟಿಯಲ್ಲಿ ತೊಡಗಿದ್ದಾರೆ. ಚುನಾವಣೆ ಸಮೀಪಿಸುತ್ತಿದ್ದಂತೆ, ತನ್ನ ಭವಿಷ್ಯದ ಭದ್ರತೆಯೂ ಕಾಡುತ್ತಿರುವುದು ಸಹಜ! ರೈಲ್ವೆ ಆದಾಯ ಡಿವಿಡೆಂಡ್ ಕೊಡಲು ಮತ್ತು ಅಭಿವೃದ್ಧಿ ವೆಚ್ಚವನ್ನು ನಿರ್ವಹಿಸಲು ಸಾಕಾಗಲಾರದಾದರೂ, ಚಾಣಾಕ್ಷತನದಿಂದ ಚೌದರಿಯವರು ತಮ್ಮ ಖಾತೆಯಲ್ಲಿ ಹೆಚ್ಚು ಕೊರತೆ ತೋರಿಸದೆ ಸಮಸ್ಯೆ ಬಗೆ ಹರಿಸಲು ವಿತ್ತ ಮಂತ್ರಿ ಪ್ರಣಬ ಮುಖರ್ಜಿಯವರಿಗೇ ಬಿಟ್ಟು ಕೊಟ್ಟು ತಾವು ನೆಮ್ಮದಿಯಿಂದ ಇದ್ದಾರೆ!

ಆದರೆ, ಈ ವರ್ಷದ ರೈಲ್ವೆ ಮುಂಗಡ ಪತ್ರವನ್ನು ಕೂಲಂಕುಶವಾಗಿ ಗಮನಿಸಿದರೆ, 1983-84 ರ ವರ್ಷದ ರೈಲ್ವೆ ಖಾತೆಯ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿದರೆ, ಅದಕ್ಷತೆ, ಸ್ಥಗಿತಸ್ಥಿತಿ, ನಷ್ಟ, ಆದಾಯದಲ್ಲಿ ಇಳಿಮುಖ, ವೆಚ್ಚದಲ್ಲಿ ಏರಿಕೆ, ಇತ್ಯಾದಿಗಳು ಒಂದೊಂದೇ ಸ್ಪಷ್ಟವಾಗುವುವು ಚೌಧುರಿಯವರು ತಮ್ಮ ಜವಾಬ್ದಾರಿಯನ್ನು ಜಾರಿಸಿ ಕೊಳ್ಳಲಾರರು.

ಸಾರಿಗೆ ದರಗಳ ಏರಿಕೆ

1984-85ರ ವರ್ಷಕ್ಕೆ ಪ್ರಯಾಣ ದರಗಳ ಹಾಗೂ ಸಾರಿಗೆ ದರಗಳ ಮೇಲೆ ಸರ್ ಚಾರ್ಜ್ ಹೇರಿಸಿ ಅನುಕ್ರಮವಾಗಿ ರೂ 104-22 ಕೋಟಿ ಮತ್ತು 10 ಕೋಟಿ ಹೆಚ್ಚುವರಿ ಆದಾಯಗಳಿಸಲು ಮುಂಗಡ ಪತ್ರದಲ್ಲಿ ಸೂಚಿಸಲಾಗಿದೆ. ಎರಡನೇ ದರ್ಜೆಯ ಸಾಮಾನ್ಯ ರೈಲು ಪ್ರಯಾಣ ಬಿಟ್ಟು ಇತರ ಎಲ್ಲಾ ಮೆಯಿಲ್—ಎಕ್ಸ್‌ಪ್ರೆಸ್ ರೈಲು ಪ್ರಯಾಣದ ರೂ. 10 ಕ್ಕಿಂತ ಹೆಚ್ಚು ಮೌಲ್ಯದ ದರಗಳ ಮೇಲೆ ರೂ 1 ರಿಂದ 5 ರಷ್ಟು ಸರ್ ಚಾರ್ಜ್ ಹೇರಿಸಲಾಗಿದೆ. ಚಿಲ್ಲರೆ ಅಭಾವದ ಕಾರಣವನ್ನು ಮುಂದೊಡ್ಡಿ ಪ್ಲಾಟ್ ಫಾರಂ ಟಿಕೇಟು ದರಗಳನ್ನು 50 ಪೈಸೆಯಿಂದ ರೂ 1 ಕ್ಕೆ ಏರಿಸಲಾಗಿದೆ ಮತ್ತು ಎಲ್ಲಾ ರೈಲ್ವೆ ಪ್ರಯಾಣದ ದರಗಳನ್ನು ರೂಪಾಯಿಯ ಪೂರ್ಣಾಂಶಕ್ಕೆ ಏರಿಸಲಾಗಿದೆ.

ಸಾರಿಗೆ ಸಾಮಗ್ರಿಗಳ "ಟು-ಪೇ" (ಪಡೆದು ಕೊಳ್ಳುವವರು ಪಾವತಿ ಮಾಡುವ) ಪಾರ್ಸೆಲ್ ದರಗಳ ಮೇಲೆ ಶೇ. 3 ರಿಂದ ಶೇ 5 ರಷ್ಟು ಸರ್ ಚಾರ್ಜ್ ಹೇರಲಾಗಿದೆ. ಜೊತೆಗೇ ಚುನಾವಣಾ ಸ್ಟಂಟ್ ಎಂಬಂತೆ, 44 ಸಾಮಗ್ರಿಗಳ ಪಾರ್ಸೆಲ್ ದರಗಳನ್ನು ಶೇ 10 ರಿಂದ ಶೇ 20 ರಷ್ಟು ಇಳಿಸಲಾಗಿದೆ. 121 ಸಾಮಗ್ರಿಗಳನ್ನು ಮರು ವರ್ಗೀಕರಿಸಿ ಅವುಗಳ ಸಾರಿಗೆ ದರಗಳಲ್ಲಿ ಶೇ 5 ರಿಂದ ಶೇ 33 ರಷ್ಟು ರಿಯಾಯತಿ ನೀಡಲಾಗಿದೆ, ಇದರಿಂದಾಗಿ ರೈಲ್ವೆ ಆದಾಯದಲ್ಲಿ ಎಷ್ಟು ಕೊರತೆ ಕಾಣುವುದೆಂದು ಮುಂಗಡ ಪತ್ರದಲ್ಲಿ ತಿಳಿಸಲಿಲ್ಲ.

ಮುಂಗಡ ಪತ್ರದ ಸಲಹೆಗಳನ್ನು ಒಂದೊಂದಾಗಿ ಪರಿಶೀಲಿಸೋಣ : 1. ಸರಕು ಸಾಮಗ್ರಿಗಳ ಸಾರಿಗೆ ದರಗಳಲ್ಲಿ ಸ್ವಲ್ಪ ರಿಯಾಯತಿ ತೋರಿಸಿದ್ದು ಸ್ವಾಗತವಾದರೂ, ದರ ಇಳಿಸುವಿಕೆಯ ಲಾಭ ಅಂತಿಮವಾಗಿ ಗ್ರಾಹಕರಿಗೆ ಮುಟ್ಟುವುದೇ ಎಂದು ಸಂಶಯ ಪಡಬೇಕಾಗಿದೆ. ಬದಲು, ಕೈಗಾರಿಕೋದ್ಯಮಿಗಳೂ ವ್ಯಾಪಾರಸ್ಥರೂ ಇದರಿಂದ ಲಾಭಗಿಟ್ಟಿಸುವ ಅವಕಾಶಗಳೇ ಹೆಚ್ಚು.

2. ಚಿಲ್ಲರೆ ನಾಣ್ಯದ ಅಭಾವದಿಂದ ಪ್ಲಾಟ್ ಫಾರಂ ಟಿಕೇಟು ದರ ಹೆಚ್ಚಿಸಿದ್ದೂ, ಇತರ ಟೀಕೆಟುಗಳ ದರಗಳನ್ನು ರೂಪಾಯಿಯ ಪೂರ್ಣಾಂಶಕ್ಕೆ ಏರಿಸಿರುವುದೂ ಬಂದು ಕೆಟ್ಟ ಸಂಪ್ರದಾಯವಾಯಿತು. ಇದರಿಂದ ಎಲ್ಲಾ ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳೂ, ವ್ಯಾಪಾರಿಗಳೂ ತಮ್ಮ ವಿಕ್ರಯದ ವಸ್ತುಗಳ ಬೆಲೆಗಳನ್ನು ರೂಪಾಯಿಯ ಪೂರ್ಣಾಂಕಕ್ಕೆ ಏರಿಸಲು ಪಾಠ ಹೇಳಿ ಕೊಟ್ಟಂತಾಯಿತು. 'ರೂಪಾಯಿ ಆಣೆ–ಪೈ"ಯಿಂದ "ರೂಪಾಯಿ–ಪೈಸೆ"ಗೆ ಹಣದ ಚಲಾವಣೆ ಪರಿವರ್ತನೆಗೊಂಡಾಗಲೇ ಸರ್ವ ಸಾಮಾನ್ಯವಾಗಿ ಹೆಚ್ಚಿನ ವಸ್ತುಗಳ ಬೆಲೆಗಳು ಪೈಸೆ ಸಮೀಪವಾಗಿ ಏರಿದವು. ನಂತರ 1, 2, 3, 5, 10 ಪೈಸೆಗಳ ನಾಣ್ಯದ ಅಭಾವದಿಂದ ಮಾರು ಕಟ್ಟೆಗಳಲ್ಲಿ ಸಾಮಗ್ರಿಗಳ ಬೆಲೆಗಳು 10 ಪೈಸೆಗೆ ಸಮೀಪವಾಗಿಯೂ ಏರ ತೊಡಗಿವೆ. ಇತ್ತೀಚೆಗೆ ಬೆಲೆಗಳು 50 ಪೈಸೆಯ ಸಮೀಪವಾಗಿಯೂ ಏರತೊಡಗಿವೆ. ಇನ್ನು ರೂಪಾಯಿಯ ಸಮೀಪವಾಗಿ ಬೆಲೆಗಳು ಏರ ತೊಡಗಿದರೆ, ವ್ಯಾಪಾರಿಗಳಿಗೆ ಕೈಗಾರಿಕೋದ್ಯಮಿಗಳಿಗೆ ಲಾಭದ ಸುಗ್ಗಿ; ಬೆಲೆ ಏರಿಕೆ ಹಣದುಬ್ಬರದಿಂದ ಬಳಲುತ್ತಿರುವ ಬಡಗ್ರಾಹಕರಿಗೆ ಕಷ್ಟ ಕಾಲ. ರೈಲ್ವೆ ಖಾತೇ—ಕೇಂದ್ರ ಸರಕಾರ ಇಂತಹ ದುಷ್ಟ ಹಾಗೂ ಕೆಟ್ಟ ಸಂಪ್ರಯದಾಯ ಹಾಕಿ ಕೊಡಬಾರದಾಗಿತ್ತು.

3. ರೈಲ್ವೆ ಪ್ರಯಾಣ ದರಗಳ ಮೇಲೆ ಸರ್ ಚಾರ್ಜ್ ವಿಧಿಸಿರುವುದು ನ್ಯಾಯ ಸಮ್ಮತವಲ್ಲ ಚುನಾವಣೆ ಮುಗಿದು ಇಂದಿರಾಗಾಂಧಿ ಅಧಿಕಾರಕ್ಕೆ ಬಂದರೆ ಆ ಮೂಲಾಗ್ರವಾಗಿ ಪ್ರಯಾಣ ದರಗಳು ಮತ್ತು ಸಾರಿಗೆ ದರಗಳು ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಇದಕ್ಕೆ ಮೊದಲು ಸಾಮಾನ್ಯ ಪ್ರಯಾಣಿಕರೂ ಅನವ್ಯಶಕವಾಗಿ ರೂ 100 ಕೋಟಿಗೂ ಹೆಚ್ಚಿನ ಕರಭಾರ ಹೊರುವಂತಾಗಿದೆ.

4 ಮುಂದಿನ ವರ್ಷದ ಮುಂಗಡ ಪತ್ರದಲ್ಲಿ ರೈಲ್ವೆ ದರಗಳಲ್ಲಿ ಹೆಚ್ಚಿನ ಏರಿಕೆಯಾಗಲಿಲ್ಲ ಎಂಬ ವಾದವೂ ಸತ್ಯಕ್ಕೆದೂರ. ಹಿಂದಿನ ವರ್ಷಗಳ ಭಾರೀ ಕರಭಾರದ ಮೇಲೆ ಈವರುಷದ ಕರಭಾರ ಹೇರಿರುವುದೂ ಗಮನಿಸಬೇಕು.

ವರ್ಷ	ಒಟ್ಟು ರೈಲ್ವೆ ಕರಭಾರ	ಸರಕು ಸಾಮಗ್ರಿ ಸಾರಿಗೆ ದರ ಏರಿಕೆ	ಪ್ರಯಾಣಿಕರಟಿಕೆಟುಗಳ ದರ ಏರಿಕೆ
1982-83	ರೂ. 261-45 ಕೋಟಿ	ರೂ. 88-50 ಕೋಟಿ	ರೂ. 172—60 ಕೋಟಿ
1983-84	ರೂ. 488-90 ಕೊಟಿ	ರೂ. 310.00 ಕೋಟಿ	ರೂ. 178—60 ಕೋಟಿ
1984-85	ರೂ. 114.22 ಕೋಟಿ	ರೂ. 10-00 ಕೋಟಿ	ರೂ. 104—22 ಕೋಟಿ

ಸಾರಿಗೆಯಲ್ಲಿ ಇಳಿಮುಖ

1983 84 ರಲ್ಲಿ ರೈಲ್ವೆಯ ಸರಕು ಸಾಮಗ್ರಿಗಳ ಹಾಗೂ ಪ್ರಯಾಣಿಕರ ಸಾರಿಗೆಯಲ್ಲಿ ಗಣನೀಯವಾಗಿ ಇಳಿಮುಖವಾಗಿದೆ ಪರಿಣಾಮವಾಗಿ ನಿರೀಕ್ಷಿತ ಆದಾಯ ಗಳಿಕೆಯಾಗದೆ ಅಪಾರನಷ್ಟವಾಗಿದೆ. ಈ ವರ್ಷದಲ್ಲಿ ಸರಕು ಸಾಮಗ್ರಿಗಳ ನಿರೀಕ್ಷಿತ ಸಾರಿಗೆಯು 241 ಮಿ. ಟನ್ ಮತ್ತದರ ಮೇಲಿನ ಆದಾಯ ರೂ. 3504 ಕೋಟಿ. ಆದರೆ, ವಾಸ್ತವವಾಗಿ, ಸಾರಿಗೆಯ ಮೊತ್ತ ಕೇವಲ 230 ಮಿ. ಟನ್ ಆಗಿದ್ದು, ಆದಾಯ ರೂ 3390 ಕೋಟಿಯಷ್ಟೇ ಆಗಿತ್ತು, ಇದರಿಂದಾಗಿ ರೂ 114 ಕೋಟಿಗಳಷ್ಟು ನಷ್ಟವುಂಟಾಯಿತು. ಹಾಗೆಯೇ, ಪ್ರಯಾಣಿಕರ ಸಾರಿಗೆಯೂ ಅದರ ಮೇಲಿನ ಆದಾಯವೂ ಕಡಿಮೆಯಾಗಿ ರೂ 38.45 ಕೋಟಿಗಳಷ್ಟು ಕೊರತೆವಾಗಿದೆ. ಸಾರಿಗೆ ಇಳಿ ಮುಖಕ್ಕೆ ಉಕ್ಕು, ಅದುರು ಕೈಗಾರಿಕೆಗಳಲ್ಲಿ ಆರ್ಥಿಕ ಹಿಂಜರಿತದ ಕಾರಣಗಳನ್ನು ಮುಂದೊಡ್ಡಿದರೂ, ರೈಲ್ವೆ ಖಾತೆಯ ಅದಕ್ಷತೆಯನ್ನು ಮುಚ್ಚಿಡಲಾಗದು.

1984–85 ರಲ್ಲಿ ಸರಕು ಸಾಮಗ್ರಿಗಳ ಸಾರಿಗೆಯು ಶೇ 6 5 ರಷ್ಟು ಏರುವುದಾಗಿ ನಿರೀಕ್ಷಿಸಲಾಗಿದ್ದು ಒಟ್ಟು 245 ಮಿ ಟನ್‌ಗೆ ಮುಟ್ಟಬಹುದೆಂದು ಅಂದಾಜು ಮಾಡಲಾಗಿದೆ. ಹಾಗೆಯೇ, ಪ್ರಯಾಣಿಕರ ಸಾರಿಗೆಯಲ್ಲಿಯೂ ಶೇ 3 ರಷ್ಟು ಹೆಚ್ಚುವರಿ ಸಾಧಿಸಲಾಗುವುದೆಂದು ನಿರೀಕ್ಷಿಸಲಾಗಿದೆ. ಇದರಿಂದ ಒಟ್ಟು ರೂ 54 57 ಕೋಟಿ ಆದಾಯ ಸಿಗುವುದೆಂದು ಅಂದಾಜು ಮಾಡಲಾಗಿದೆ. ಈ ನಿರೀಕ್ಷೆ ಕೈಗೂಡದಿದ್ದರೆ 1984-85 ರಲ್ಲಿಯೂ ರೈಲ್ವೆ ಖಾತೆಭಾರೀ ನಷ್ಟವನ್ನನುಭವಿಸಲಿದೆ.

ವೆಚ್ಚದಲ್ಲಿ ಏರಿಕೆ

ಸಾರಿಗೆ ಆದಾಯದಲ್ಲಿ ಇಳಿಮುಖವಾದರೂ, ರೈಲ್ವೆಖಾತೆಯ ವೆಚ್ಚ ಹೆಚ್ಚುತ್ತಲೇ ಇದೆ 1983-84 ರಲ್ಲಿ ರೈಲ್ವೆಯ ಒಟ್ಟು ಆದಾಯವು ರೂ 5172 ಕೋಟಿ ಎಂದು ನಿರೀಕ್ಷಿಸಿದ್ದರೂ, ಅಂತಿಮವಾಗಿ ರೂ. 5024 ಕೋಟಿಯಷ್ಟೇ ಆಗಿತ್ತು. ಆದರೆ ಒಟ್ಟು ವೆಚ್ಚ ರೂ 3488 ಕೋಟಿ ಎಂದು ನಿರೀಕ್ಷಿಸಿದ್ದರೂ, ಸಾರ್ವಜನಿಕ ವೆಚ್ಚದಲಿ ಶೇ 3 ರಷ್ಟು ಕಡಿತಗೊಳಿಸಬೇಕೆಂಬ ಪ್ರಧಾನಿಯ ಆದೇಶ ದಾಲಿಸಿಯೂ, ವರ್ಷಾಂತ್ಯದಲ್ಲಿ ರೈಲ್ವೆ ವೆಚ್ಚವು ರೂ 3676 ಕೋಟಿ ಗೇರಿತು. ವರ್ಷ ವರ್ಷವೂ ರೈಲ್ವೆ ಖಾತೆಯ ಆಡಳಿತ ವೆಚ್ಚದ ಅಂಶವು ಒಟ್ಟು ಆದಾಯದಲ್ಲಿ ಹೆಚ್ಚುತ್ತಲೇ ಇದೆ. ಉ: 1963–64 : 74.7 ಶೇ. 1982 83–88.3 ಶೇ. 1983-84-93 9. ಶೇ ಆದಾಯದಸಿಂಹಪಾಲು ಅಂದರೆ ಶೇ 94 ರಷ್ಟು ಆಡಳಿತ ವೆಚ್ಚಕ್ಕೇ ವಿನಿಯೋಗವಾಗುತ್ತಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲ ಸಾಕಷ್ಟು ಸಿಗುತ್ತಿಲ್ಲ. 1984-85 ರಲ್ಲಿ ರೂ 5457 ಕೋಟಿ ಒಟ್ಟ ಆದಾಯದಲ್ಲಿ ರೂ 5082 ಕೋಟಿ ಆಡಳಿತ ವೆಚ್ಚಕ್ಕೆ ಮೀಸಲಾಗಿಡಲಾಗಿದೆ. ರೂ. 420 ಕೋಟಿ ಉಳಿತಾಯವು ಡಿವಿಡೆಂಡ್ ಕೊಡಲಿಕ್ಕೆ ರೂ 70 ಕೋಟಿಯಷ್ಟು ಕಡಿಮೆಯಾಗುವುದು. ಹಿಂದಿನ ವರ್ಷ ರೂ 111-50 ಕೋಟಿಯಷ್ಟು ಡಿವಿಡೆಂಡ್ ಕೊಡಲು ಆದಾಯ ಕಡಿಮೆಯಾಗಿತ್ತು. ಇನ್ನು ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರ ಸರಕಾರದ ಸಾಮಾನ್ಯ ಮುಂಗಡಪತ್ರದ ಖರ್ಚು ವೆಚ್ಚಗಳಿಂದಲೇ ಪಡೆಯಬೇಕಾಗುವುದು.

ಅಭಿವೃದ್ಧಿಯಲ್ಲಿ ಕೊರತೆ

ರೈಲ್ವೆ ಖಾತೆಯ ಆದಾಯ ಇಳಿಮುಖವಾಗುತ್ತಿದ್ದು, ಆಡಳಿತ ವೆಚ್ಚ ಹೆಚ್ಚುತ್ತಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲ ದೊರಕುವುದು ದುಸ್ತರವಾಗುತ್ತಿದೆ. 1983–84 ರಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ರೂ 1442 ಕೋಟಿ ಮೀಸಲಾಗಿರಿಸಿದ್ದು, ಯೋಜನೆಯ ಕೊನೆಯ ವರ್ಷವಾದ 1984 85 ರಲ್ಲಿ ರೂ 1650 ಕೋಟಿ ಮೀಸಲಾಗಿಡಲಾಗಿದೆ.

ಇದಕ್ಕೆ ರೂ 850 ಕೋಟಿ ರೈಲ್ವೆ ಖಾತೆಯ ಆಂತರಿಕ ಉಳಿತಾಯದಿಂದಲೂ, ರೂ 800 ಕೋಟಿ ಕೇಂದ್ರ ಸರಕಾರದ ಸಾಮಾನ್ಯ ಮುಂಗಡ ಪತ್ರದಿಂದಲೂ ಸಿಗುವುದು. ಆದರೆ ಹಣದುಬ್ಬರ ಮತ್ತು ಬೆಲೆ ಏರಿಕೆಗಳಿಂದ ಅಭಿವೃದ್ಧಿ ಕಾರ್ಯಗಳ ವೆಚ್ಚಗಳೂ ವಿಪರೀತ ಹೆಚ್ಚಾಗಿ ಮಧ್ಯವರ್ತಿಗಳಾದ ಕಂಟ್ರ್ಯಾಕ್ಟರುಗಳು ಮತ್ತು ಅವರ ರಾಜಕೀಯ ಏಜಂಟರುಗಳು ಭಾರೀ ಲಾಭ ಗಿಟ್ಟಿಸುತ್ತಾರೆ, ದೇಶದ ಜನಸಾಮಾನ್ಯರು ಅವರ ಕಷ್ಟ ನಷ್ಟಗಳನ್ನು ಅನುಭವಿಸುತ್ತಲೇ ಇದ್ದಾರೆ. ನೂರಾರು ಅಭಿವೃದ್ಧಿ ಯೋಜನೆಗಳು ಹತ್ತಾರು ವರ್ಷಗಳಿಂದ ಅಸಂಪೂರ್ಣ ಸ್ಥಿತಿಯಲ್ಲಿಯೇ ಇವೆ ಹೊಸ ರೈಲುದಾರಿಗಳಿಗೆ ಒಟ್ಟು ರೂ 1000 ಕೋಟಿ ಬೇಕಾಗಬಹುದಾದರೆ, 1984-85 ರ ಮುಂಗಡ ಪತ್ರದಲ್ಲಿ ಕೇವಲ ರೂ 90 ಕೋಟಿ ಇವುಗಳಿಗಾಗಿ ಮೀಸಲಾಗಿರಿಸಿದೆ. ಮಂತ್ರಿ ಚೌದುರಿಯವರೇ ಹೇಳುವಂತೆ, ಪುಸ್ತಕದಲ್ಲಾದರೂ ಈ ಯೋಜನೆಗಳು ಉಳಿಯಲು ಅಲ್ಪ ಸ್ವಲ್ಪ ಹಣ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಾಗಿರಿಸಲಾಗುತ್ತಿದೆ! ಅವುಗಳು ಪೂರ್ಣಗೊಳ್ಳುವುದು ಎಂದೋ ತಿಳಿಯದು, ಇದೂ ಒಂದು ರಾಜಕೀಯ ಸ್ಟಂಟ್!

ಚುನಾವಣೆ ದೃಷ್ಟಿಯ ಕೇಂದ್ರ ಬಜೆಟ್

—ಎನ್. ಕೆ. ಉಪಾಧ್ಯಾಯ

ಈ ಹಿಂದಿನ ವರ್ಷಗಳಲ್ಲಿ ಜನ ಸಾಮಾನ್ಯರ ಮೇಲೆ ಕರಭಾರ ಹೇರುವುದರಲ್ಲಿ ಯಾವ ಮುಲಾಜನ್ನೂ ತೋರಿಸದ ಇಂದಿರಾ ಗಾಂಧಿ ಜನತೆಯಲ್ಲಿ ತನ್ನ ಪ್ರಭಾವ ಕುಸಿಯುತ್ತಿರುವುದನ್ನು ಕಂಡು ಹಳೇ ತಂತ್ರಗಳಿಂದ ತನ್ನ ಹೆಸರಿನ ಪ್ರಭಾವದಿಂದಲೇ ಮತ ಗಳಿಸಲು ಸಾಧ್ಯವಿಲ್ಲೆಂದು ಮನವರಿಕೆಯಾದುದರಿಂದಲೇ ಮತಗಳಿಕೆಯ ಹೊಸ ತಂತ್ರವನ್ನು ಹೂಡಿದ್ದಾರೆ. ಒಂದು ಕಡೆ ರಾಜೀವ ಗಾಂಧಿ, ಜನಾರ್ಧನ ಪೂಜಾರಿಗಳ ಮೂಲಕ ರಾಷ್ಟ್ರೀಕೃತ ಬ್ಯಾಂಕುಗಳ ಅಪಾರ ಹಣವನ್ನು ಯಾವ ಜಾಮೀನು ಇಲ್ಲದೆ "ಬಡವರಿಗೆ" ಹಂಚುತ್ತಿರುವಂತೆಯೇ, ಕೈಗಾರಿಕೋದ್ಯಮಿಗಳನ್ನು, ಮಧ್ಯಮ ವರ್ಗದವರನ್ನೂ ಆಕರ್ಷಿಸುವ ದೃಷ್ಟಿಯಿಂದ ಹೊಸ ಬಜೆಟನ್ನು ಮಂಡಿಸಿದ್ದಾರೆ.

ಇದು ಚುನಾವಣೆಯ ವರ್ಷ. ಮತ ಗಿಟ್ಟಿಸುವ ದೃಷ್ಟಿಯಿಂದಲೇ ಈ ಬಜೆಟ್ಟನ್ನು ತಯಾರಿಸಲಾಗಿದೆ. ಜನರ ಜೀವನ ಮಟ್ಟ ಎತ್ತರಿಸುವ ದೃಷ್ಟಿಯಿಂದಾಗಲೀ, ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲ ಒದಗಿಸುವದರಲ್ಲಾಗಲೀ ಈ ಬಜೆಟ್ ನಿರಾಶೆಯನ್ನುಂಟು ಮಾಡಿದೆ. ರೂ. 2035 ಕೋಟಿ ಕೊರತೆಯ ಈ ಬಜೆಟ್ ಹಣ ದುಬ್ಬರವನ್ನು ಹೆಚ್ಚಿಸುವುದರಲ್ಲಿ ಸಂಶಯವಿಲ್ಲೆಂಬ ಅಭಿಪ್ರಾಯವನ್ನು ವಿರೋಧ ಪಕ್ಷಗಳ ಮುಖಂಡರು ವ್ಯಕ್ತ ಮಾಡಿದ್ದಾರೆ. ಕೇಂದ್ರ ರಾಜ್ಯಗಳಿಗೆ ಕೊಡಲಿರುವ ಪಾಲು ಅತ್ಯಲ್ಪವಾಗಿದೆಂದೂ ಆರೋಪಿಸಿದ್ದಾರೆ.

1982-83 ರಲ್ಲಿ ರೂ. 533 ಕೋಟಿ, 83-84 ರಲ್ಲಿ. ರೂ. 716 ಕೋಟಿ ಹೆಚ್ಚು ತೆರಿಗೆಯನ್ನು ಜನರ ಮೇಲೆ ಹೇರಿದ್ದ ಇಂದಿರಾ ಗಾಂಧಿ ಈ ವರ್ಷ ಬರೀ ರೂ. 273 ಕೋಟಿಯ ಹೊಸ ತೆರಿಗೆ ಹೇರಿ ಅರ್ಥ ಸಚಿವ ಪ್ರಣವ ಮುಖರ್ಜಿಯವರ ಹೊಸ ವರ್ಷದ ಬಜೆಟ್ ಮೂಲಕ "ತಾನು ಬಡವರ ತಾಯಿ" ಎಂಬುದನ್ನು ಪ್ರದರ್ಶಿಸಲು ಹೊರಟಿದ್ದಾರೆ.

ಇಷ್ಟು ವರ್ಷಗಳ ತನ್ನ ಸಂಮಿಶ್ರ ಆರ್ಥಿಕ ನೀತಿಯಿಂದ ಅಪ್ರತ್ಯಕ್ಷ ತೆರಿಗೆಗಳ ಮೂಲಕ ಸಾರ್ವಜನಿಕರ ಬೆನ್ನು ಮೂಳೆಯೇ ಮುರಿಯುವಂತೆ ಮಾಡಿ, ಗಗನಕ್ಕೇರಿದ ಬೆಲೆಯಿಂದಾಗಿ ಒಪ್ಪೊತ್ತು ಹೊಟ್ಟೆ ತುಂಬ ಅನ್ನ ತಿನ್ನುವ ಅವಕಾಶವನ್ನೂ ಒದಗಿಸದೆ, ಪ್ರತ್ಯಕ್ಷಕರಗಳ ವಿನಾಯತಿಯ ಮೂಲಕ ಶ್ರೀಮಂತ ವರ್ಗಕ್ಕೂ, ಗುತ್ತೇದಾರಿ ಬಂಡವಲ ದಾರರಿಗೂ ಅಪಾರ ಲಾಭ ಗಳಿಸಿಕೊಟ್ಟ ಇಂದಿರಾ ಗಾಂಧಿ ಎಲ್ಲರಿಗೂ ವಿನಾಯತಿ ಎಂಬ ಘೋಷಣೆಯನ್ನು ಈ ಬಜೆಟ್ಟಿನ ಮೂಲಕ ಘೋಷಿಸಿದ್ದಾರೆ. ಆದರೆ ಈ ಘೋಷಣೆ ಬರೀ ಪೊಳ್ಳು ಎಂಬುದನ್ನು ಎಲ್ಲರೂ ಬರುವ ದಿವಸಗಳಲ್ಲಿ ಕಾಣಬಹುದು. ಯಾಕೆಂದರೆ ರೂ. 1762 ಕೋಟಿ ಕೊರತೆಯನ್ನು ತುಂಬಿ ಕೊಳ್ಳಲು ಮುಂಬರುವ ಚುನಾವಣೆ ಮುಗಿದ ಕೂಡಲೇ ಹೊಸಕರಗಳನ್ನು ಹೇರಲೇ ಬೇಕಾಗುತ್ತದೆ, ಅಥವಾ ಹೊಸ ನೋಟುಗಳನ್ನು ಛಾಪಿಸಿ ಈಗಿರುವ 10·4 ಹಣದುಬ್ಬರವನ್ನು ಇನ್ನೂ ಜಾಸ್ತಿಯಾಗುವಂತೆ ಮಾಡ ಬೇಕಾಗುತ್ತದೆ.

ಹೋದ ವರ್ಷ ಬಜೆಟ್ ಮಂಡಿಸುವುದಕ್ಕೆ ಮುಂಚಿತವಾಗಿಯೇ, ಪೆಟ್ರೋಲ್, ಡೀಸೆಲ್, ರಸಾಯನಿಕ ಗೊಬ್ಬರ ಮೊದಲಾದ ವಸ್ತುಗಳ ಬೆಲೆ ಹೆಚ್ಚಿಸಿ ಪರಾಕ್ರಮ ತೋರಿಸಿದ್ದ ಇಂದಿರಾ ಗಾಂಧಿ ಈ ವರ್ಷ ಈಗಾಗಲೇ ಕಲ್ಲಿದ್ದಲು, ಸಕ್ಕರೆ, ಅಕ್ಕಿ ಮೊದಲಾದವುಗಳ ಬೆಲೆ ಹೆಚ್ಚಿಸಿದ್ದಾರೆ. ಹೊಸಕರ ಹೇರಲ್ಪಡದಿದ್ದರೂ ಕೂಡ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಕೊರತೆಯ ಹಣಕಾಸು ನೀತಿಯನ್ನೇ ಮುಂದುವರಿಸುತ್ತಿರುವಾಗ, ಜನಸಾಮಾನ್ಯರ ಕೈಗೆಡಕದಷ್ಟಿರುವ ಅತ್ಯಾವಶ್ಯಕ ವಸ್ತುಗಳ ಬೆಲೆ ಕಡಿಮೆಯಾಗಲು ಸಾಧ್ಯವಿಲ್ಲ. ಕೊರತೆಯನ್ನು ತುಂಬಿ ಕೊಳ್ಳಲು. ಹೆಚ್ಚು ನೋಟು ಛಾಪಿಸಲೇ ಬೇಕಾಗಿರುವುದರಿಂದ ಈ ಬಜೆಟ್ಟಿನಲ್ಲಿ ತೋರಿಕೆಗೆ ಜನಸಾಮಾನ್ಯರ ಬಳಕೆ ವಸ್ತುಗಳ ಮೇಲೆ ಹೊಸಕರ ಹೇರದಿದ್ದರೂ, ಮಧ್ಯಮ ವರ್ಗದವರಿಗೆ ವರಮಾನ ತೆರಿಗೆಯಲ್ಲಿ ಸ್ವಲ್ಪ ವಿನಾಯತಿ ತೋರಿಸಲ್ಪಟಿದ್ದರೂ, ಒಟ್ಟಾರೆ ಈಗಾಗಲೇ ಹೇರಲ್ಪಟ್ಟಿರುವ ಭಾರ ಕಡಿಮೆಯಾಗಲು ಸಾಧ್ಯವಿಲ್ಲ ಅಷ್ಟೇ ಅಲ್ಲ ಅದು ಹೆಚ್ಚಾಗುವುದರಲ್ಲಿ ಸಂಶಯವಿಲ್ಲ.

ಕೈಗಾರಿಕೋದ್ಯಮಿಗಳು, ಬೆಲೆ ಹೆಚ್ಚಳಕ್ಕೆ ಕಾರಣೀ ಭೂತರಾದವರು, ಕೈಗಾರಿಕೆಗಳನ್ನು ಮುಚ್ಚಿ ಉತ್ಪಾದನೆ ನಿಲ್ಲಿಸಿ ಕೊರತೆ ಉಂಟು ಮಾಡಿದವರೇ ಈ ಬಜೆಟನ್ನು ಸ್ವಾಗತಿಸಿದ್ದಾರೆ. ಇಂಥವರ ಪ್ರತಿಕ್ರಿಯೆ ಬಜೆಟ್ಟಿನ ಗುಣಮಟ್ಟ ತೋರಿಸುತ್ತದೆ.

ಬಜೆಟ್ ಪರಿಚಯ

1984-85 ರ ಸಾಲಿಗೆ ಸರಕಾರದ ಒಟ್ಟು ಆದಾಯ ರೂ 40,501 ಕೋಟಿ ಒಟ್ಟು ವೆಚ್ಚ ರೂ. 42, 536 ಕೋಟಿ. ಈಗಿನ ತೆರಿಗೆ ಪ್ರಮಾಣದಲ್ಲಿ ಒಟ್ಟು ಕೊರತೆ ರೂ. 2035 ಕೋಟಿ. ಹೊಸಕರಗಳ ಮೂಲಕ ರೂ 273·88 ಕೋಟಿ ಬರುವ ಅಂದಾಜಿರುವುದರಿಂದ ಅಂತಿಮ ಕೊರತೆ ರೂ. 1762 ಕೋಟಿ ಆಗ ಬಹುದಾಗಿದೆ

ಈಗಿರುವ ವಿವಿಧ ತೆರಿಗೆಗಳ ಮೂಲಕ ಬರುವ ಒಟ್ಟು ಮೊತ್ತ ರೂ. 22,946 ಕೋಟಿ, ಹೋದ ವರ್ಷದ ತೆರಿಗೆ ಆದಾಯ ರೂ. 20,940. ಈ ವರ್ಷ ರೂ. 3 ಸಾವಿರದಷ್ಟು ಹೆಚ್ಚಾಗಲಿದೆ

ವಸೂಲಾದ ತೆರಿಗೆಗಳಲ್ಲಿ ರಾಜ್ಯಗಳ ಪಾಲು ಕಳೆದ ವರ್ಷ ರೂ. 5, 246 ಕೋಟಿ ಇತ್ತು. ಈ ವರ್ಷ ರೂ 5, 736 ಕೋಟಿ. ಇದು ಸುಮಾರು ರೂ. 500 ಕೋಟಿ, ಹೆಚ್ಚಳ ಒಟ್ಟು ತೆರಿಗೆ ಆದಾಯ ರೂ. 17,254 ಕೋಟಿ ಮಾರುಕಟ್ಟೆ ಸಾಲಗಳಿಂದ ರೂ. 4, 100 ಕೋಟಿ, ಸಣ್ಣ ಉಳಿತಾಯದಿಂದ ರೂ. 42, 536 ಕೋಟಿ ಒಟ್ಟು ಕೊರತೆ ರೂ. 2035 ಕೋಟಿ.

ಪ್ರತಿಕ್ರಿಯೆ ಪರಿಣಾಮಗಳು

ಕೆಲವು ಪ್ರತಿಕ್ರಿಯೆ, ಪರಿಣಾಮಗಳನ್ನು ಪ್ರಾರಂಭದಲ್ಲಿಯೇ ಉಲ್ಲೇಖಿಸಲಾಗಿದೆ. ಕೊರತೆಯ ಮುಂಗಡ ಪತ್ರ ಯಾವಾಗಲೂ ಬೆಲೆಯೇರಿಕೆ, ಅತಿಪ್ರಸರಣಕ್ಕೆ ಕಾರಣ ಭೂತವಾಗುತ್ತದೆಂದು ಗೊತ್ತಿದ್ದೂ, ಇಂಥ ಬಜೆಟ್ ಮಾಡಿದ ಹತಾಶ ಪ್ರಯತ್ನ. "ರಾಜ್ಯಗಳ ಪಾಲಿನ ವ್ಯಾಪ್ತಿಯಲ್ಲಿ ಬರುವ ಅನೇಕ ವಸ್ತುಗಳಲ್ಲಿ ರಿಯಾಯಿತಿ ಒದಗಿಸುವ ಮೂಲಕ ರಾಜ್ಯಗಳ ಆದಾಯ ಕತ್ತರಿಸಿದ್ದಾರೆ. ಹೀಗೆ ಮಾಡುವಾಗ ಮೊದಲೇ ಕ್ಷೀಣವಾದ ಹಣದ ಸ್ಥಿತಿಯಿಂದ ದುರ್ಬಲವಾಗಿರುವ ರಾಜ್ಯಗಳ ಜೊತೆಗೆ ಅನೌಪಚಾರಿಕವಾಗಿಯೂ ಚರ್ಚಿಸಲಿಲ್ಲ. ಇದು ದುರದೃಷ್ಟಕರ ಇದು ಕೇಂದ್ರ ರಾಜ್ಯಗಳ ಮಧುರ ಬಾಂಧವ್ಯಕ್ಕೆ ಹಿತಕರವಲ್ಲ. ಕೊರತೆಯ ಬಜೆಟ್‌ನಿಂದ ಜನ ಸಾಮಾನ್ಯರ ಮತ್ತು ರಾಜ್ಯಗಳ ಅಭಿವೃದ್ಧಿ ಯೋಜನೆಗಳಿಗೆ ಭಾರಿ ಹೊಡೆತ ಬೀಳಲಿದೆ. ಈ ಬಜೆಟ್‌ನಲ್ಲಿ ರಾಜ್ಯಗಳಿಗೆ ಸಂದಾಯ ಮಾಡುವ ಧನ ಸಹಾಯ ತೃಪ್ತಿಕರವಾಗಿಲ್ಲ." ಎಂದು ಎನ್. ಟಿ ರಾಮರಾವ್ ಪ್ರತಿಕ್ರಿಯೆ ವ್ಯಕ್ತ ಮಾಡಿದ್ದಾರೆ.

ಪಶ್ಚಿಮ ಬಂಗಾಲದ ಅರ್ಥ ಮಂತ್ರಿ ಅಶೋಕ ಮಿತ್ರ ಅವರು ಉತ್ಪನ್ನ ತೆರಿಗೆ ಮತ್ತು ಎಕ್ಸೈಸ್ ಡ್ಯೂಟಿ ವಿನಾಯತಿಯಿಂದಾಗಿ ರಾಜ್ಯ ಸರಕಾರಗಳಿಗೆ ಇವುಗಳಿಂದ ಸಲ್ಲತಕ್ಕ ಪಾಲಿನಲ್ಲಿ ಕಡಿತವಾಗಿ ರಾಜ್ಯಗಳ ಅಭಿವೃದ್ಧಿ ಕೆಲಸಗಳಿಗೆ ಆತಂಕ ಉಂಟಾಗುತ್ತದೆ. ರಾಜ್ಯಗಳ ಕಿಸೆ ಕತ್ತರಿಸಿ ತಾನು ಉದಾರವಾದಿ ಎಂದು ತೋರಿಸಿ ಕೊಟ್ಟು ಮತಗಳಿಸುವ ದೃಷ್ಟಿಯಿಂದ ಈ ಬಜೆಟ್ ತಯಾರಿಸಲಾಗಿದೆಂಬ ಅಬಿಪ್ರಾಯ ವ್ಯಕ್ತ ಮಾಡಿದ್ದಾರೆ.

ಸಂಪನ್ಮೂಲ ಹಾಗೂ ಇತರ ಸೌಲಭ್ಯಗಳು ಗ್ರಾಮೀಣ ಪ್ರದೇಶಗಳ ದುರ್ಬಲ ವರ್ಗಗಳಿಗೆ ಲಭ್ಯವಾಗುವಂತೆ ಅವಕಾಶ ಕಲ್ಪಿಸುವುದು ಹಾಗೂ 20 ಅಂಶ ಕಾರ್ಯಕ್ರಮಗಳ ಅನುಷ್ಠಾನವನ್ನು ತ್ವರಿತಗೊಳಿಸುವುದು ಇವುಗಳಿಗೆ ಒತ್ತು ನೀಡಲಾಗಿದೆಂದು ಅರ್ಥ ಮಂತ್ರಿ ಹೇಳಿದ್ದಾರೆ. ಇಪ್ಪತ್ತಂಶಗಳ ಕಾರ್ಯಕ್ರಮಗಳಿಗೆ ಈ ವರ್ಷ 4038 ಕೋಟಿ, ಕೇಂದ್ರ, ರಾಜ್ಯ, ಹಾಗೂ ಕೇಂದ್ರಾಡಳಿತ ಪ್ರದೇಶಗಳ ಒಟ್ಟು ವಾರ್ಷಿಕ ಯೋಜನೆಯ ಪ್ರತಿಶತ 40 ರಷ್ಟು ಅಂದರೆ, ರೂ. 11, 850 ಕೋಟಿ ಒದಗಿಸಲಾಗಿದೆಯಂತೆ. ಗ್ರಾಮಾಂತರ ಪ್ರದೇಶದ ಬಡ ಜನರ, ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಇಷ್ಟು ಹಣ ಖರ್ಚು ಮಾಡಿದರೂ, ಬಡವರ ಸಂಖ್ಯೆ ಮತ್ತೂ ಹೆಚ್ಚುಗುತ್ತಿದೆಂಬ ಅಂಕೆ ಸಂಖ್ಯೆಗಳನ್ನು ಕೇಂದ್ರ ಸರಕಾರವೇ ಪ್ರಕಟಿಸುತ್ತಿರುವಾಗ, ಹನ್ನೊಂದು ಸಹಸ್ರ ಕೋಟಿ ರೂಪಾಯಿಯನ್ನು ಯಾವರೀತಿಯಲ್ಲಿ ವ್ಯಯ ಮಾಡಲಾಗುತ್ತಿದೆಂಬ ಸ್ಪಷ್ಟ ಚಿತ್ರ ಎಲ್ಲರ ಕಣ್ಣು ಮುಂದೆ ಬರುವುದು ಸಹಜ. ರಾಷ್ಟ್ರದ ಸಂಪತ್ತು ದೇಶದ ಅಭಿವೃದ್ಧಿಗಾಗಿ ಖರ್ಚಾಗದೆ, ಕೆಲವೇ ಸ್ವಜನ ಪಕ್ಷ ಪಾತಿಗಳ, ಆಳುವ ಕಾಂಗ್ರೆಸ್ ಮುಖಂಡರ ಕಿಸೆ ಸೇರುವುದರಿಂದಲೇ ಗ್ರಾಮಾಂತರ ಪ್ರದೇಶದ ಜನರ ಸ್ಥಿತಿಗತಿ ಇದ್ದಂತೆಯೇ ಇರುವುದನ್ನು ಕಾಣಬಹುದಾಗಿದೆ.

ಈ ವರ್ಷ ರಕ್ಷಣಾ ವೆಚ್ಚ ರೂ 6 800 ಕೋಟಿಯಷ್ಟು ಹೆಚ್ಚಿಸಿ, ಚುನಾವಣಾ ವರ್ಷದಲ್ಲಿ ಭಾರತದ ಮೇಲೆ ಆಕ್ರಮಣದ ಭೀತಿ ಇದೆಂಬುದನ್ನು ತೋರಿಸಿ ದೇಶವನ್ನು ರಕ್ಷಿಸಲು ಬಲಿಷ್ಠ ಕೇಂದ್ರ ಬೇಕು, ಬಲಿಷ್ಠ ಕೇಂದ್ರದಲ್ಲಿ ಬಲಿಷ್ಠರಾದ ಇಂದಿರಾ ಗಾಂಧಿ ಬೇಕೆಂದು ಪ್ರತಿಪಾದಿಸಲು ಒಳ್ಳೆ ಅವಕಾಶ ಮಾಡಿಕೊಂಡಿದ್ದಾರೆ.

ಕೇಂದ್ರದ ಬಜೆಟ್ಟಿನಲ್ಲಿ ಕರ್ನಾಟಕಕ್ಕೆ ಹೇಳಿ ಕೊಳ್ಳುವಂಥ ಧನ ಸಹಾಯ ವಿಲ್ಲ. ರೈಲ್ವೆ ಬಜೆಟ್ಟಿನಲ್ಲಿ ಕರ್ನಾಟಕವನ್ನು ಕೈಬಿಡಲಾಗಿದೆಂಬ ಅಂಶವನ್ನು ಹೋದವಾರ ಪ್ರಕಟಿಸಿದ್ದೇವೆ. ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ವಿಜಯನಗರ ಉಕ್ಕಿನ ಕಾರ್ಖಾನೆಗೆ ಬರೀ ರೂ. 2 ಕೋಟಿ ತೆಗೆದಿಡಲಾಗಿದೆ. ಹೋದ ವರ್ಷದ ಒಂದು ಕೋಟಿ ಎಲ್ಲಿ ನಾಪತ್ತೆಯಾಗಿದೆಯೋ ಗೊತ್ತಿಲ್ಲ, ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಲೀ, ನೀರಾವರಿ ವಿದ್ಯುಚ್ಛಕ್ತಿ ಉತ್ಪಾದನೆಗಳಿಗಾಗಲೀ ಈ ಬಜೆಟಿನಲ್ಲಿ ಹಣ ಮಂಜೂರಾತಿಯಾಗಿರದಿರುವುದು ದುರದೃಷ್ಟಕರ.

ಒಟ್ಟಾರೆ ಈ ವರ್ಷದ ಬಜೆಟ್ಟು ಮತಗಳಿಕೆಗಾಗಿ ಯಕ್ಷಿಣೀ ಪ್ರಯೋಗವೆಂದು ಹೇಳಿದರೆ ತಪ್ಪಾಗಲಾರದು. ಈ ಬಜೆಟ್ಟಿನಿಂದ ಸಾರ್ವಜನಿಕರು ಉತ್ಸಾಹ ಹುಮ್ಮಸ್ಸು ಪಡೆಯುವುದಿಲ್ಲವೆಂಬುದು ಮಾತ್ರ ನಿಜ.

(4ನೇ ಪುಟದಿಂದ)

6 ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ (1980-85) ರೈಲ್ವೆ ಅಭಿವೃದ್ಧಿಗೆ ರೂ 5,100 ಕೋಟಿ ಮೀಸಲಾಗಿಟ್ಟಿತ್ತು. ಆದರೆ ಬೆಲೆ ಏರಿಕೆಯ ಕಾರಣದಿಂದ ಮರು ಪರಿಶೀಲನೆಯ ನಂತರ ಈ ವೆಚ್ಚದ ಮೊತ್ತವನ್ನು ರೂ 6594 ಕೋಟಿಗೇರಿಸಲಾಯಿತು ಆದರೆ, ಯೋಜನೆಯ ಅವಧಿಯಲ್ಲಿ ನಿರೀಕ್ಷಿಸಿದ ಅಭಿವೃದ್ಧಿ ಕಾರ್ಯಗಳಲ್ಲಿ ಭಾರೀ ಹಿನ್ನಡೆಯಾಗಿರುವುದನ್ನು ಈ ಕೆಳಗಿನ ಅಂಕೆ ಸಂಖ್ಯೆಗಳಿಂದ ಗಮನಿಸಬಹುದು.

ಅಭಿವೃದ್ಧಿ ಕಾರ್ಯಗಳು	ಯೋಜನೆಯಗುರಿ	ಕಾರ್ಯಸಾಧನೆ	ಹಿನ್ನಡೆ (ಕೊರತೆ)
ರೈಲ್ವೆ ದಾರಿಗಳ ನವೀಕರಣ :	14 000 ಕಿಮೀ.	9150 ಕಿಮೀ	4850 ಕಿಮೀ
ಸಾರಿಗೆಯ ಹೊಸಬಂಡಿಗಳು :	100 000	72000	28000
ಪ್ರಯಾಣಿಕರ ಹೊಸಬಂಡಿಗಳು :	6680	5000	1680
ರೈಲುದಾರಿ ವಿದ್ಯುತ್‌ಕರಣ :	2800	1800	1000
ಹೊಸ ರೈಲ್ವೆ ಇಂಜಿನುಗಳು :	980	950	30
ಅಭಿವೃದ್ಧಿ ವೆಚ್ಚ (ರೂ ಕೋಟಿ :)	5100	6594	1494

ಕರ್ನಾಟಕದಲ್ಲಿಯೇ ಹೊಸ ರೈಲ್ವೆ ದಾರಿಗಳು ಮತ್ತಿತರ ಯೋಜನೆಗಳು ಪೂರ್ಣ ಗೊಳ್ಳದೆ ನನೆಗುದಿಗೆ ಬಿದ್ದಿವೆ. ಉದಾ : ಮಂಗಳೂರು - ಹಾಸನ, ಚಿತ್ರದುರ್ಗ-ರಾಯದುರ್ಗ, ಮೈಸೂರು. ಬೆಂಗಳೂರು ಬ್ರಾಡ್‌ಗೇಜ್, ಕೃಷ್ಣರಾಜಪುರಂ - ವೈಟ್‌ಫೀಲ್ಡ್ ಎರಡು ದಾರಿ, ಗುಂತಕಲ್. ಧರ್ಮಾವರಂ ಸಮನಾಂತರ ಬ್ರಾಡ್‌ಗೇಜ್, ಧರ್ಮಾವರಂ-ಬೆಂಗಳೂರು ಬ್ರಾಡ್‌ಗೇಜ್, ವಾಡಿ-ರಾಯಚೂರು ಎರಡುದಾರಿ, ಧಾರವಾಡ-ಲೋಂಡ ಮತ್ತು ಹುಬ್ಬ ಧಾರವಾಡ ದಾರಿಗಳಲ್ಲಿ ಹೊಸ ಸಿಗ್ನಲ್‌ಗಳು, ಬೆಂಗಳೂರು-ಜೋಲಾರ್‌ಪೇಟೆ ವಿದ್ಯುತೀಕರಣ, ಬೆಂಗಳೂರಿನ ರೈಲ್ವೆ ಚಕ್ರಗಳ ಕಾರ್ಖಾನೆ ಮತ್ತು ರೈಲ್ವೆ ಸಿಬ್ಬಂದಿಗಳಿಗೆ ವಸತಿ ಸೌಕರ್ಯ ಯೋಜನೆಗಳು. ಇತ್ಯಾದಿ.

ಅಪಘಾತಗಳು

ಮುಂಗಡ ಪತ್ರದಲ್ಲಿ ಮಂತ್ರಿಗಳು ರೈಲ್ವೆ ಅಪಘಾತಗಳು ಕಡಿಮೆಯಾಗುತ್ತಿವೆ ಎಂದು ಸಮಾಧಾನ ವ್ಯಕ್ತ ಪಡಿ

(7ನೇ ಪುಟ ನೋಡಿ)

ಕಾರ್ಮಿಕ ಸಂಘಗಳ ರಾಜ್ಯ ಸಮಾವೇಶ

ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿಯ ಆಶ್ರಯದಲ್ಲಿ 20-4-84 ರಂದು ನವದೆಹಲಿಯಲ್ಲಿ "ಕೈಗಾರಿಕಾ ಘಟಕಗಳ ಮುಚ್ಚುವಿಕೆ, ಬೀಗಮುದ್ರೆ, ಲೇ ಆಫ್, ನೌಕರಿಯಿಂದ ತೆಗೆಯುವಿಕೆ,'ಗಳ ವಿರುದ್ಧವಾಗಿ ನಡೆದ ಅಖಿಲಭಾರತ ಸಮಾವೇಶವು ಕೊಟ್ಟಿರುವ ಕರೆಯ ಮೇರೆಗೆ ಕರ್ನಾಟಕ ರಾಜ್ಯ ಸಮಾವೇಶವು 18 3-1984 ರಂದು ಬೆಂಗಳೂರಿನ ಟೌನ್‌ಹಾಲಿನಲ್ಲಿ ಮುಂಜಾನೆ 10 ಗಂಟೆಗೆ ಸೇರುತ್ತದೆ. ಸಮಾವೇಶದಲ್ಲಿ ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ, ಬಿ.ಎಂ.ಎಸ್, ಎಚ್.ಎಂ.ಎಸ್ ಗಳಲ್ಲದೆ, ಜೀವವಿಮೆ, ಬ್ಯಾಂಕ್ ಮೊದಲಾದ ಕಾರ್ಮಿಕ ಕೇಂದ್ರಗಳ ಪ್ರತಿನಿಧಿಳೂ ಭಾಗವಹಿಸುತ್ತಾರೆ. ಈ ಸಮಾವೇಶವನ್ನು ಯಶಸ್ವಿಗೊಳಿಸಲು ಎಲ್ಲರೂ ಸಹಕರಿಸಬೇಕು.

"ಸಿ.ಐ.ಟಿ.ಯು ಪತ್ರಿಕೆ"

ಕಾರ್ಮಿಕರ ಚಳುವಳಿಗಳನ್ನು ಪ್ರತಿಬಿಂಬಿಸಿ, ಅವರ ಹೋರಾಟಗಳಿಗೆ ಮಾರ್ಗದರ್ಶನ ಅವರಲ್ಲಿ, ರಾಜಕೀಯ ಜಾಗೃತಿಯನ್ನುಂಟು ಮಾಡುವ ಉದ್ದೇಶದಿಂದ ರಾಜ್ಯ ಸಿಐಟಿಯು ಕೇಂದ್ರದಿಂದ "ಸಿ.ಐ.ಟಿ.ಯು ಪತ್ರಿಕೆ" ಎಂಬ ಮಾಸ ಪತ್ರಿಕೆ ಹೊರಡಿಸಬೇಕೆಂದು ದಾಂಡೇಲಿಯಲ್ಲಿ ಸೇರಿದ ಕೌನ್ಸಿಲ್ ಸಭೆಯಲ್ಲಿ ನಿರ್ಧರಿಸಲಾಗಿದೆ. ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪನವರು ಇದರ ಸಂಪಾದಕರು. ವಾರ್ಷಿಕ ಚಂದಾ ರೂ. 12. ಎಲ್ಲ ಕಾರ್ಮಿಕ ಸಂಘಗಳೂ ಆದಷ್ಟು ಹೆಚ್ಚು ಚಂದಾದಾರರನ್ನು ನೋಂದಾಯಿಸಿ ಸಹಕರಿಸ ಬೇಕಾಗಿ ವಿನಂತಿ.

ರಾಜ್ಯದ ಸಿ.ಐ.ಟಿ.ಯು. ಸಮ್ಮೇಳನ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯದ ನಾಲ್ಕನೆಯ ಸಮ್ಮೇಳನವನ್ನು 1984 ಮೇ ತಿಂಗಳ ಮಧ್ಯದಲ್ಲಿ ಮಂಗಳೂರಿನಲ್ಲಿ ಜರುಗಿಸಲು ದಾಂಡೇಲಿ ಕೌನ್ಸಿಲ್ ಸಭೆಯಲ್ಲಿ ನಿರ್ಧರಿಸಲಾಗಿದೆ.

ಪ್ಲಾಯವುಡ್ ಕಾರ್ಮಿಕರ ಒಪ್ಪಂದ

ಇಂಡಿಯನ್ ಪ್ಲಾಯ್‌ವುಡ್ ಆಡಳಿತ ವರ್ಗ ಹಾಗು ಸಿ. ಐ. ಟಿ. ಯು. ನೇತೃತ್ವದ ಕಾರ್ಮಿಕ ಸಂಘಗಳ ಮಧ್ಯ ದೀರ್ಘವಾದ ಚರ್ಚೆಯ ನಂತರ 82-83 ನೆ ಸಾಲಿನ ಬೋನಸ್ ಬಗ್ಗೆ 29-2-84 ರಂದು ಒಪ್ಪಂದವಾಯ್ತು. ಇದರಿಂದ ದಾಂಡೆಲಿಯಲ್ಲಿಯ ಪ್ಲಾಯವುಡ್ ಕಾರ್ಮಿಕರು 15 ಶೇ. ಮತ್ತು ಧಾರವಾಡದಲ್ಲಿಯ ಪ್ಲಾಯವುಡ್ ಕಾರ್ಮಿಕರು 16 ಶೇ. ಬೊನಸ್ ಪಡೆಯುತ್ತಾರೆ. ಮುಖ್ಯವಾದ ಅಂಶವೆಂದರೆ ಉತ್ಪಾದಕತೆಗೂ ಬೋನಸ್‌ಗೂ ಯಾವುದೇ ಸಂಬಂಧಗಳು ಈ ಒಪ್ಪಂದದಲ್ಲಿಲ್ಲ. ಕಾರ್ಮಿಕರ ಪರವಾಗಿ ಸಿ. ಐ. ಟಿ. ಯು. ಕಾರ್ಯದರ್ಶಿ ಮತ್ತು ಧಾರವಾಡ, ದಾಂಡೇಲಿ ಪ್ಲಾಯವುಡ್ ಕಾರ್ಮಿಕ ಸಂಘಗಳ ಅಧ್ಯಕ್ಷರಾದ ಕಾ. ವಿ. ಜೆ. ಕೆ. ನಾಯರ್ ಮತ್ತು ಎರಡೂ ಕಾರ್ಮಿಕ ಸಂಘಗಳ ಪ್ರಧಾನ ಕಾರ್ಯದರ್ಶಿಯಾದ ಕಾ. ಎಂ. ಬಿ. ಕಟ್ಟಿ ಇವರು ಮಾತುಕತೆಯಲ್ಲಿ ಭಾಗವಹಿಸಿದ್ದರು ಆಡಳಿತ ವರ್ಗದ ಪರವಾಗಿ ಜನರಲ್ ಮ್ಯಾನೆಜರ್ ಶ್ರೀ ಕೆ. ಎಸ್. ಲಾಲಿ ಭಾಗವಹಿಸಿದ್ದರು. ಎಂಬುದಾಗಿ ಪ್ರಕಟನೆಯಲ್ಲಿ ತಿಳಿಸಲಾಗಿದೆ.

ಕ್ವಾಲಿಟಿ ಬಿಸ್ಕತ್ ಕಾರ್ಖಾನೆ ಬೀಗಮುದ್ರೆ

ಸರ್ಕಾರದ ಕುಮ್ಮಕ್ಕು

ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಕ್ವಾಲಿಟಿ ಬಿಸ್ಕತ್ ಕಾರ್ಖಾನೆಯ ಆಡಳಿತ ವರ್ಗ 26-11-1983 ರಿಂದ ಅಕ್ರಮ ಬೀಗ ಮುದ್ರೆ ಘೋಷಿಸಿರುವುದರ ಪರಿಣಾಮವಾಗಿ ಸುಮಾರು ಮೂರೂವರೆ ತಿಂಗಳುಗಳಿಂದ ಅಲ್ಲಿನ 400 ಕಾರ್ಮಿಕರು ತೀರ ತೊಂದರೆಗೆ ಒಳಗಾಗಿದ್ದಾರೆ ಆಡಳಿತ ವರ್ಗದ ಈ ದಬ್ಬಾಳಿಕೆಗೆ ಕಾರ್ಮಿಕ ಮಂತ್ರಿ ಅಜೀಜ್‌ಸೇಠ್ ಅವರು ರಕ್ಷಣೆ ಕೊಡುತ್ತಿದ್ದಾರೆಂದು ಸಿ.ಐ.ಟಿ.ಯು. ಗೆ ಸೇರಿದ ಅಲ್ಲಿನ ಕಾರ್ಮಿಕ ಸಂಘ ಆಪಾದಿಸಿದೆ. ಆಡಳಿತ ವರ್ಗದ ಹಾಗೂ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು 5-3 84 ರಂದು ಕಾರ್ಖಾನೆಯ ಕಾರ್ಮಿಕರು ಮುಖ್ಯ ಮಂತ್ರಿಗಳ ನಿವಾಸದ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ಮುಖ್ಯ ಮಂತ್ರಿಗಳು ಶ್ರೀ ಫ್ರವೇ ಈ ಕುರಿತು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ನಂತರ ಧರಣಿಯನ್ನು ಹಿಂತೆಗೆದುಕೊಳ್ಳಲಾಯಿತೆಂದು ಸಂಘದ ಉಪಾಧ್ಯಕ್ಷರಾದ ಕಾ. ಟಿ. ಎಸ್. ಅನಂತರಾವ್ ತಿಳಿಸಿದ್ದಾರೆ.

ಕಾರ್ಖಾನೆಯಲ್ಲಿ ಹಿಂಸೆಯ ವಾತಾವರಣ ಇದೆಯೆಂದು ಸುಳ್ಳು ನೆಪ ಹೇಳಿ ಕಾರ್ಮಿಕರು ಮುಚ್ಚಳಿಕೆ ಬರೆದು ಕೊಡಬೇಕೆಂದು ಒತ್ತಾಯಿಸುತ್ತಿರುವ ಆಡಳಿತ ವರ್ಗದ ನೀತಿ ಅಕ್ರಮವಾದುದು ಮತ್ತು ಕಾರ್ಮಿಕ ವಿರೋಧಿಯಾದುದು ಎಂಬುದಾಗಿ ಸಂಘವು ಮುಖ್ಯ ಮಂತ್ರಿಗಳಿಗೆ ನೀಡಿರುವ ಮನವಿಯಲ್ಲಿ ತಿಳಿಸಿದೆ. ಅಲ್ಲದೆ ಕಾರ್ಮಿಕರು ಕಾರ್ಮಿಕ ಕಮಿಷನರ್ ಅವರ ಬಳಿ ವಿವಾದವನ್ನು ಹೂಡಿದ್ದರೂ ಸಮಸ್ಯೆ ಬಗೆ ಹರಿದಿಲ್ಲ.

ಕಾರ್ಮಿಕರು ಕಾರ್ಮಿಕ ಮಂತ್ರಿಗಳ ಮನೆಗೆ ಮೆರವಣಿಗೆ ಹೋಗಿ ಮನವಿ ಅರ್ಪಿಸಿದ್ದರೂ ಕೂಡ ಏನೂ ಪ್ರಯೋಜನವಾಗಿಲ್ಲ. ಬದಲಾಗಿ ಕಾರ್ಮಿಕ ಮಂತ್ರಿಯವರು ಕಾರ್ಮಿಕ ಮುಖಂಡರ ಬಳಿ ದುರಹಂಕಾರ ಪ್ರವೃತ್ತಿಯನ್ನು ಪ್ರದರ್ಶಿಸಿದ್ದಾರೆಂದು ಮನವಿಯಲ್ಲಿ ತಿಳಿಸಲಾಗಿದೆ.

ಕಾರ್ಮಿಕರ ಸಂಕಷ್ಟಗಳ ಬಗ್ಗೆ ಸರ್ಕಾರ ಬೇಜವಾಬ್ದಾರಿಯುತವಾಗಿ ವರ್ತಿಸಿರುವುದನ್ನು ಸಿ.ಐ.ಟಿ.ಯು. ಖಂಡಿಸಿ ಕೂಡಲೇ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ತ್ವರಿತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ದ. ಕ. ಜಿಲ್ಲೆಯ ಹಂಚಿನ ಮಜೂರರ ಯಶಸ್ವೀ ಹೋರಾಟ

ಎಐಟಿಯುಸಿ ಮುಖಂಡರ ಮಜೂರ ದ್ರೋಹ ನೀತಿಯ ಪ್ರದರ್ಶನ

ಮಂಗಳೂರಿನ ಹಂಚಿನ ಕಾರ್ಖಾನೆಗಳ ಕೆಲಸಗಾರರು ತಾ. 12-12-83 ರಿಂದ ನಡೆಸಿದ 53 ದಿವಸಗಳ ಮುಷ್ಕರವು ಇದೀಗ ಕೊನೆಗೊಂಡಿದ್ದು ಕೆಲಸಗಾರರು ಪುನಃ ಕಾರ್ಖಾನೆಗಳಲ್ಲಿ ಕೆಲಸ ಆರಂಭಿಸಿದ್ದಾರೆ.

ಹಂಚಿನ ಕೆಲಸಗಾರರ ಹೋರಾಟಗಳ ಇತಿಹಾಸದಲ್ಲೇ ಅತಂತ್ಯ ದೀರ್ಘ ಕಾಲ ನಡೆದ, ಶಾಂತಿಯುತ ಹೋರಾಟ ವಿದು. ಈ ಸಂದರ್ಭದಲ್ಲಿ ಕೆಲಸಗಾರರು ತೋರಿಸಿದ ಸಂಯಮ, ಶಿಸ್ತು, ದೃಢತೆಗಳು ಅತ್ಯಂತ ಅನುಕರಣೀಯ ಹಾಗೂ ಅಭಿನಂದನೀಯ.

ಈ ಮುಷ್ಕರವು ನಡೆದುದು, ಸಿ.ಐ. ಟಿ.ಯು. ಮತ್ತು ಎ.ಐ.ಟಿ.ಯು. ಸಿ.ಯ ಸಂಯುಕ್ತ ನೇತೃತ್ವದಲ್ಲಿ. ಆದರೆ ಮುಷ್ಕರದ ವೇಳೆ ಎ.ಐ.ಟಿ.ಯು.ಸಿ. ಯ ನೇತೃತ್ವ ವಹಿಸಿದವರು ಯಾವ ರೀತಿಯಲ್ಲಿ ಸಹಕಾರ ನೀಡಿದ್ದಾರೆಂಬುದು ಮಜೂರರಿಗೆ ಚೆನ್ನಾಗಿ ತಿಳಿದ ವಿಷಯವಾಗಿದೆ. ಎ.ಐ.ಟಿ.ಯು.ಸಿ.ಯ ಮುಖಂಡರು, ಪಂಚಾಯತಿಯ ಪ್ರತಿಯೊಂದು ಹಂತದಲ್ಲೂ ತಮ್ಮ ಒರಟು ಧೋರಣೆಗಳನ್ನೇ ಮುಂದಿಟ್ಟುಕೊಂಡು, ಎಲ್ಲ ಹಂತಗಳಲ್ಲೂ ಬೆನ್ನ ಹಿಂದೆ ಇರಿಯುವ ನೀತಿಯನ್ನೇ ಅನುಸರಿಸಿದ್ದರೆಂಬುದು ಸರ್ವವಿದಿತ.

ಯಾವಾಗಲೂ, ಯಾವುದೇ ಮುಷ್ಕರದ ವೇಳೆ ಮಂಡಿಸಿದ ಎಲ್ಲ ಬೇಡಿಕೆಗಳೂ ಪೂರೈಸಲ್ಪಡುವುದಿಲ್ಲವೆಂಬುದನ್ನು ಎ.ಐ.ಟಿ.ಯು.ಸಿ (ಐಟಕ್) ನ ಮುಖಂಡರೂ ಬಲ್ಲರು, ಮಜೂರರೂ ಬಲ್ಲರು. ಅದರಂತೆಯೇ ಈ ಮಹಾ ಮುಷ್ಕರಕ್ಕೆ ಸಂಬಂಧಿಸಿ ಆದ ಒಪ್ಪಂದದಲ್ಲಿಯೂ ಮಜೂರರ ಎಲ್ಲಾ ಕೇಳಿಕೆಗಳೂ ಸಿಕ್ಕಿವೆಯೆಂದು ನಾವು ಹೇಳುತ್ತಿಲ್ಲ. ಆದರೆ ಈ ಮುಷ್ಕರದಲ್ಲಿ ಮಜೂರರ ಪ್ರಮುಖ ಬೇಡಿಕೆಯಾದ ಏರಿಳಿತ ತುಟ್ಟಿಭತ್ತೆಯ ಸೂತ್ರವನ್ನು ಮಾಲಕರೂ ಸರಕಾರವೂ ಒಪ್ಪಿಕೊಂಡಿದೆ ಯೆಂಬುದು ಒಂದು ಗಮನಾರ್ಹ ವಿಜಯವಾಗಿದೆ.

ಆದರೆ ಈ ಸಂದರ್ಭವನ್ನು ದುರುಪಯೋಗಪಡಿಸಿ, ಮಜೂರರಲ್ಲಿ ತಪ್ಪು ಕಲ್ಪನೆಗಳನ್ನು ಹುಟ್ಟಿಸುವ ಒಂದೇ ಕುತಂತ್ರವನ್ನು ಮುಂದಿಟ್ಟುಕೊಂಡು, ಐಟಕ್ ಸಂಘಟನೆಯ ನೇತೃತ್ವ ವಹಿಸಿದವರು ಒಂದು ಕರಪತ್ರವನ್ನು ಹೊರಡಿಸಿ ಸಿ.ಐ.ಟಿ.ಯು ಸಂಘಟನೆಯ ಮೇಲೆ ಹಲವಾರು ದುರುದ್ದೇಶಪೂರಿತ, ಸತ್ಯಕ್ಕೆ ಸಂಪೂರ್ಣ ದೂರವಾದ, ಅಪಪ್ರಚಾರಗಳನ್ನು ಹೊರಿಸಿ, ತಾವು ಒಪ್ಪಂದಕ್ಕೆ ಏಕೆ ಸಹಿ ಹಾಕಲಿಲ್ಲ ಎಂಬುದನ್ನು ಸಮರ್ಥಿಸಲು 'ಈ ಒಪ್ಪಂದವು ನ್ಯಾಯಸಮ್ಮತವೇ ?, ಎಂಬ ನೋಟೀಸೊಂದನ್ನು ಹೊರಡಿಸಿದ್ದಾರೆ.

ಈ ನೋಟೀಸಿಗೆ ಉತ್ತರ ಕೊಡುವ ಮೊದಲು ಈ ಐಟಕ್‌ನವರು ತುರ್ತು ಪರಿಸ್ಥಿತಿಯ ಕಾಲಾವಧಿಯಲ್ಲಿ 'ಮಜೂರರ ಹಿತರಕ್ಷಣೆ,ಯನ್ನು ಸಾಧಿಸಿದ ರೀತಿಯನ್ನು ಮಜೂರರು ಇನ್ನೂ ಮರೆತಿಲ್ಲ. ತುರ್ತು ಪರಿಸ್ಥಿತಿಯ ಕಾಲಾವಧಿಯಲ್ಲಿ ಕಾಂಗ್ರೆಸ್ಸಿನ ಇಂದಿರಾ ಸರಕಾರ ಮುಂದೆ ತಂದಂತಹ ಮಜೂರ ವಿರೋಧಿ ಕಾನೂನುಗಳಿಗೆಲ್ಲ "ನ್ಯಾಯ ಸಮ್ಮತಿ" ಯನ್ನು ನೀಡಿದವರು ಇದೇ ಐಟಕ್ ಮುಖಂಡರಲ್ಲವೇ ? ಆಗ ಇತರ ವರ್ಗಗಳ ಜತೆಗೆ ಕಾರ್ಮಿಕ ವರ್ಗದ ಮೇಲೆಯೂ ಕಾಂಗ್ರೆಸ್ ಸರಕಾರ ನಡೆಸಿದ ದಬ್ಬಾಳಿಕೆ, ಕಾರ್ಮಿಕ ವಿರೋಧಿ ನೀತಿಗಳನ್ನು ನ್ಯಾಯ ಸಮ್ಮತವಾಗಿ ಸಮರ್ಥಿಸಿದವರು ಇದೇ ಐಟಕ್‌ನ ಮುಖಂಡರಲ್ಲವೇ ? ತುರ್ತು ಪರಿಸ್ಥಿತಿಯ ವೇಳೆ ಇಂದಿರಾ ಗಾಂಧಿಯವರ ಕೈಯನ್ನು ಬಲಪಡಿಸಲು ಅದನ್ನು ಎತ್ತಿಹಿಡಿದು, ಮಜೂರರ ಬೋನಸ್ಸನ್ನು ಶೇಕಡಾ 4ಕ್ಕೆ ಇಳಿಸಿದ್ದನ್ನು, ಕಡ್ಡಾಯ ಠೇವಣಿಯನ್ನು ಮಜೂರರ ಮೇಲೆ ಹೇರಿದ್ದನ್ನು ವೇತನ ಸ್ತಂಭನ ನೀತಿಯನ್ನು ಒಪ್ಪಿಕೊಂಡದ್ದು ಇದೇ ಐಟಕ್ ಮುಖಂಡರಲ್ಲವೇ ?

ಆದರೆ, ಆ ತುರ್ತು ಪರಿಸ್ಥಿತಿಯ ಕಾಲದಲ್ಲಿ ಕೂಡಾ, ಹಂಚಿನ ಕಾರ್ಖಾನೆಯ ಮಜೂರರು ತಮ್ಮ ಸಂಘಟಿತ ಪ್ರಯತ್ನದಿಂದ, ಸೀಟೂ ಸಂಘದ ನೇತೃತ್ವದಲ್ಲಿ ನಡೆಸಿದ ಮಾತುಕತೆ ಒಪ್ಪಂದಗಳ ಮೂಲಕ ಶೇಕಡಾ 9 ಬೋನಸ್ ಪಡೆಯಲು ಶಕ್ತರಾಗಿದ್ದರೆಂಬುದನ್ನು ಐಟಕ್ ಮುಖಂಡರು ಮರೆತರೇ ?

ಈ ಬಾರಿ ನಡೆಸಿದ ಈ ಮಹಾ ಹೋರಾಟದ ಮುಖ್ಯ ಕೇಳಿಕೆ "ಏರಿಳಿತ ತುಟ್ಟಿಭತ್ತೆ" (D. A.) ಯನ್ನು ಪಡೆಯುವುದಾಗಿತ್ತು. ಅದಕ್ಕಾಗಿ ಸರಕಾರದ ಮೇಲೆ ಒತ್ತಾಯವನ್ನು ತರುವ ಒಂದೇ ಉದ್ದೇಶದಿಂದ ಮುಷ್ಕರವನ್ನು ಮುಂದುವರಿಸಿಕೊಂಡು ಹೋಗಲಾಯಿತೆಂಬುದನ್ನು ಸಮ್ಮ ಮಜೂರ ಬಾಂಧವರಿಗೆ ಚೆನ್ನಾಗಿ ತಿಳಿದಿದೆ. ಹಂಚಿನ ಕೈಗಾರಿಕೆಯಲ್ಲಿ ಈ

(8ನೇ ಪುಟ ನೋಡಿ)

14. 3. 1984 ರಂದು ಸಿ. ಐ. ಟಿ. ಯು. ಬೇಡಿಕೆಗಳ ದಿನ

ಕಾರ್ಮಿಕ ಇಲಾಖೆಯ ಕಛೇರಿಗಳಲ್ಲಿ, ಕಾರ್ಮಿಕ ನ್ಯಾಯಾಲಯ ಮತ್ತು ಕೈಗಾರಿಕಾ ನ್ಯಾಯಾಲಯಗಳಲ್ಲಿ ತೀರ್ಪುಗಳನ್ನು ಗೆಜೆಟ್‌ಗಳಲ್ಲಿ ಪ್ರಕಟಿಸುವುದರಲ್ಲಿ ಆಗುತ್ತಿರುವ ಅನಗತ್ಯ ವಿಳಂಬ ಹೋಗಬೇಕು; ಕನಿಷ್ಟ ಕೂಲಿಯ ದರಗಳನ್ನು ಕೂಡಲೇ ಪ್ರಕಟಿಸಬೇಕು. ಇ. ಎಸ್. ಐ. ಆಸ್ಪತ್ರೆಗಳಲ್ಲಿ ಸಿಬ್ಬಂದಿ ಮತ್ತು ಔಷಧಿಗಳ ಕೊರತೆಯನ್ನು ನೀಗಿಸಿ ಕಾಯಿಲೆಯಾದ ಕಾರ್ಮಿಕರಿಗೆ ಅಗತ್ಯವಾದ ಚಿಕಿತ್ಸೆ ಸಿಕ್ಕಬೇಕು ವಿದ್ಯುತ್ ಕಡಿತದಿಂದಾದ ಲೇಆಫ್'ಗಳಿಂದ ನರಳುತ್ತಿರುವ ಕಾರ್ಮಿಕರಿಗೆ ಅವರ ಕೂಲಿಗೆ ಸಮನಾದಷ್ಟು ಲೇ-ಆಫ್ ಅವಧಿಗೆ ಕೊಡಬೇಕು, ದಿನಬಳಕೆಯ ಅಗತ್ಯ ವಸ್ತುಗಳನ್ನು. ಪಡಿತರದ ಮೂಲಕ ಎಲ್ಲಾ ಪಟ್ಟಣಗಳು ಮತ್ತು ಹಳ್ಳಿಗಳಲ್ಲಿರುವ ಜನರಿಗೆ ಸತತವಾಗಿ ಸರಬರಾಜು ಮಾಡಬೇಕು, ಕೃಷಿ ಕೂಲಿಕಾರರಿಗೆ ನಿಗದಿಯಾಗುವ ಕನಿಷ್ಟಕೂಲಿ ಅವರಿಗೆ ರಾಜ್ಯಾದ್ಯಂತ ಸಿಕ್ಕುವಂತಾಗಬೇಕು, ಕೈಗಾರಿಕಾ ವಿವಾದಗಳಲ್ಲಿ ಮತ್ತು ಹೋರಾಟಗಳಲ್ಲಿ ಕಾರ್ಮಿಕರ ಮೇಲೆ ಮತ್ತು ಕಾರ್ಯಕರ್ತರ ಮೇಲೆ ಪೋಲೀಸರು ಹಿಂದೆ ಹೂಡಿರುವ ಮೊಕದ್ದಮೆಗಳನ್ನು ಹಿಂತೆಗೆದು ಕೊಳ್ಳಬೇಕು ಎಂಬ ಬೇಡಿಕೆಗಳಿಗಾಗಿ ರಾಜ್ಯಾದ್ಯಂತ ನಮ್ಮ ಕಾರ್ಮಿಕ ಸಂಘಗಳು ಸಾಮೂಹಿಕ ಪ್ರದರ್ಶನಗಳನ್ನು ಮತ್ತು ಕಾರ್ಮಿಕ ಇಲಾಖೆಯ ಕಛೇರಿಗಳ ಮುಂದೆ ಸಾಮೂಹಿಕ ಪಿಕೆಟಿಂಗ್ ನಡೆಸಿ ಬಂಧನಕ್ಕೆ ಗುರಿಯಾಗುವುದರ ಮೂಲಕ "ಸಿ. ಐ. ಟಿ. ಯು. ಬೇಡಿಕೆಗಳ ದಿನ' ವನ್ನು ಆಚರಿಸಬೇಕು ಎಂದು ರಾಜ್ಯ ಮಂಡಳಿಯ ಸಭೆಯು ಕರೆ ಕೊಟ್ಟಿದೆ.

ಲೆಬನಾನ್ : ಮುಗಿಯದ ಘರ್ಷಣೆ

ಲೆಬನಾನಿನ ಕಡಲ ತೀರದ ಬಳಿ ಠಾಣ ಮಾಡಿಕೊಂಡಿರುವ ಬೃಹತ್ ನೌಕಾವ್ಯೂಹಕ್ಕೆ ಬೈರೂತ್‌ನಲ್ಲಿರುವ ತನ್ನ ನೌಕಾಪಡೆಯನ್ನು ವಾಪಾಸು ಕರೆಸಿಕೊಳ್ಳಬೇಕೆಂಬ ಅಮೇರಿಕದ ನಿರ್ಧಾರವು ಅರಬ್ ಜಗತ್ತಿನಲ್ಲಿ ಅಮೇರಿಕದ ಹಸ್ತಕ್ಷೇಪದ ಅಪಾಯವನ್ನು ತೋರಿಸುತ್ತದೆ. ವಿಮಾನ ಸಾಗಿಸುವ ಎರಡೂ ನೌಕೆಯು ಸೇರಿದಂತೆ ತನ್ನ 30 ಕ್ಕೂ ಹೆಚ್ಚಿನ ಯುದ್ಧ ನೌಕೆಗಳಿಂದ ಅಮೇರಿಕವು ಬಾಂಬ್ ಹಾಕಲು ಆರಂಭಿಸಿದೆ. ಅಲ್ಲದೆ, ಲೆಬನಾನಿನೊಳಗೇ ತಮ್ಮ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳಲು ಒದ್ದಾಡುತ್ತಿರುವ ರಾಷ್ಟ್ರೀಯ ದೇಶ ಪ್ರೇಮಿ ಸೈನ್ಯವನ್ನು ನುಚ್ಚು ನೂರು ಮಾಡಲು ನೌಕಾಪಡೆ ಕಳುಹಿಸಲೂ ಅಮೆರಿಕ ಹಿಂಜರಿಯುವುದಿಲ್ಲ.

ತನ್ನ ಪಡೆಗಳೂ ವಾಪಾಸಾಗುವುದೆಂದು ಬ್ರಿಟನ್ ಪ್ರಕಟಿಸಿದ್ದರೆ, ಲೆಬನಾನಿನ ಷಿಯಾಟ್ ನೆಲೆಗಳ ಮೇಲೆ ಬಾಂಬ್ ಹಾಕಿದ ಅಮೆರಿಕಕ್ಕೆ ಫ್ರಾನ್ಸ್ ಪೂರ್ಣ ಸಹಕಾರ ನೀಡಿದೆ.

ಅತಿ ಕಡಿಮೆ ವೆಚ್ಚದಲ್ಲಿ ಅಥವಾ ವೆಚ್ಚವೇ ಇಲ್ಲದೆ ಅತಿ ಹೆಚ್ಚು ಮಧ್ಯ ಪ್ರವೇಶ ಮಾಡಬೇಕೆಂಬ ಧೋರಣೆಯೇ ನೌಕಾಪಡೆ ವಾಪಾಸು ಕರೆಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಕಾರಣ.

ಲೆಬನಾನಿನಲ್ಲಿ ಅಮೆರಿಕದ ಪಾತ್ರವೇನೆಂದರೇ ಲೆಬನಾನ್ ಸೇನೆಯನ್ನು ಅದರ ನಾಯಕ ಅಮಿನ್ ಗೆಮಯಲ್ ಅವರ ಮೂಲಕ ಎತ್ತಿ ಕಟ್ಟುವುದು. ಅದೇ ಸಮಯದಲ್ಲಿ ಇಸ್ರೇಲಿನ ಹಿತಾಸಕ್ತಿಗಳನ್ನು ಕಡೆಗಣಿಸಬಾರದೆಂದು ಹೇಳುವುದು–ಇದು ಅಮೆರಿಕದ ಇಬ್ಬಗೆ ನೀತಿ.

ಗೆಮಯಲ್ ಅವರ ಅಲ್ಪ ಮತ ಸರ್ಕಾರಕ್ಕೆ ಆಸರೆ ಕೊಡುವುದೇ ತನ್ನ ಉದ್ದೇಶ ಎಂದು ಅಮೇರಿಕ ಅನೇಕ ಬಾರಿ ಹೇಳಿಕೊಂಡಿದೆ. ಇದೇ ಸರ್ಕಾರವು ಕಳೆದ ಮೇನಲ್ಲಿ ಇಸ್ರೇಲ್ ಜೊತೆ ಒಪ್ಪಂದ ಮಾಡಿಕೊಂಡಿತ್ತು. 22,000 ಬಲದ ಇಸ್ರೇಲಿ ಸೇನೆಯು 1982 ರಲ್ಲಿ ತಾನು ಕಳೆದುಕೊಂಡಿದ್ದ ಲೆಬನಾನಿನ ದಕ್ಷಿಣ ಭಾಗವನ್ನು ಮರಳಿ ಪಡೆಯುವುದೇ ಒಪ್ಪಂದದ ತಿರುಳು.

ಲೆಬನಾನಿನ ಸೇನೆಯಲ್ಲಿದ್ದ ಮುಸ್ಲಿಂ ಸೈನಿಕರು ಡ್ರೂಸ್ ಬಲದ ಜೊತೆ ಸೇರಿಕೊಳ್ಳಲಾರಂಭಿಸಿದ ಮೇಲೆ ಫೆಬ್ರುವರಿ ಆರಂಭದಿಂದಲೂ ಈ ನಿಲುವು ಗಮನಾರ್ಹವಾಗಿ ಬದಲಾಗಿದೆ. ಡ್ರೂಸ್ ಮೇ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿದೆ. ಮತ್ತು ಅವು ಅಮೆರಿಕ ಬಾಂಬ್ ದಾಳಿಗೆ ಪ್ರಮುಖ ಬಲಿಯೂ ಆಗಿದೆ. ಹೆಚ್ಚು ಕಮ್ಮಿ ಅದರೊಂದಿಗೇ ಬಂದಿತು ಮೂರು ಮುಸ್ಲಿಂ ಸಚಿವರ ರಾಜೀನಾಮೇ ಮತ್ತು ಇಡೀ ಸಂಪುಟದ ರಾಜೀನಾಮೆ. ಈ ಬೆಳವಣಿಗೆಗಳಿಂದಾಗಿ ಲೆಬನಾನ್ ಏಕೆ ಬೈರೂತ್ ಅನ್ನೇ ಹತೋಟಿಯಲ್ಲಿಟ್ಟುಕೊಳ್ಳಲಾಗದ ಗೆಮಯಲ್ ಇನ್ನಷ್ಟು ಪ್ರತ್ಯೇಕಗೊಂಡು ಬಿಟ್ಟರು.

ಈ ಪರಿಸ್ಥಿತಿ ಇದ್ದಾಗಲೇ ಅಮೆರಿಕವು ತನ್ನ ನೌಕಾಪಡೆ ವಾಪಸಿನ ನಿರ್ಧಾರಕ್ಕೆಗೊಂಡು, ತನ್ನ ನೌಕಾನೆಲೆಯಿಂದ ಸತತ ಬಾಂಬ್ ನಡೆಸಿದ್ದು. ಇದು ವಿಯಟ್ನಾಂ ಸಮರವನ್ನು ನೆನಪಿಗೆ ತಂದಿತು.

ಆದರೆ ಇದಕ್ಕೂ ಮುಂಚೆ ಅಮಿನ್ ಗೆಮಯಲ್ ಬಹಳ ಒಂಟಿಯಾಗುತ್ತಿದ್ದಾರೆ ಮತ್ತು ಅವರು ಅಮೆರಿಕದ ಕೈಗೊಂಬೆಯಲ್ಲದೆ ಬೇರೇನೂ ಅಲ್ಲವೆಂಬುದು ಹೊರಬರಲಾರಂಭಿಸಿತು. ತಮ್ಮ ನಿಲುವು ಸ್ಪಷ್ಟಪಡಿಸಲು ಜಿನಿವಾದಲ್ಲಿ ಕಳೆದ ಅಕ್ಟೋಬರ್‌ನಲ್ಲಿ ಅವರು ಸಮಾವೇಶವೊಂದನ್ನು ಕರೆದರು ಅದರಲ್ಲಿ ಕ್ರಿಶ್ಚಿಯನ್, ಮುಸ್ಲಿಂ ಮತ್ತು ಇತರ ವರ್ಗಗಳವರು ಪಾಲ್ಗೊಂಡಿದ್ದರು. ಮನಸ್ತಾಪ ಮರೆತು ರಾಷ್ಟ್ರಿಯ ಒಗ್ಗಟ್ಟಿನ ಪ್ರಯತ್ನ ಇದು.

ಆದರೆ ಮೇ ಒಪ್ಪಂದ ಮುರಿಯುವುದು ಮತ್ತು ಲೆಬನಾನ್ ಸೇನೆಯಲ್ಲಿ ತಮ್ಮ ಫಲಾಂಗವಾದದ ಹತೋಟಿ ಬಿಟ್ಟುಕೊಡುವುದಕ್ಕೆ ಗೆಮಯಲ್ ಒಪ್ಪದ್ದರಿಂದ ಸಮಾವೇಶ ವಿಫಲವಾಯಿತು.

ನಿರಂತರ ಶಿಥಿಲ ಸಮರ ಮತ್ತು ಇಸ್ರೇಲ್ ನೊಂದಿಗೆ ಸಹಕಾರದ ನೀತಿಯಿಂದಾಗಿ ಗೆಮಯಲ್ ಅವರ ಕೊನೆ ಕಂಡಿತಲ್ಲದೆ, ಅಮೆರಿಕ ಮತ್ತು ಇಸ್ರೇಲ್ ಗೆಮಯಲ್ ಪರ ಅನವಶ್ಯ ಮಧ್ಯ ಪ್ರದೇಶ ಮಾಡಿರದಿದ್ದರೆ ಎಲ್ಲವೂ ಬೇರೆಯ ರೀತಿಯಲ್ಲೇ ಆಗುತ್ತಿತ್ತು.

ತಮ್ಮ ನಿಲುವನ್ನು ಪುನರ್‌ಸ್ಥಾಪಿಸಲು ಗೆಮಯಲ್ ಫೆಬ್ರುವರಿ 27 ರಂದು ಮತ್ತೆ ಜಿನಿವಾದಲ್ಲಿ ಸಭೆ ಕರೆದಿದ್ದಾರೆ ಆದರೆ ಮೇ ಒಪ್ಪಂದ ಮುರಿಯುವ ಬಗ್ಗೆ ಇನ್ನೂ ಅವರ ನಿರ್ಧಾರ ಅಚಲವಾಗಿಲ್ಲ.

ಹೀಗಾಗಿ ಅಂಥ ಸಮಾವೇಶ ಸಫಲವಾಗ ಬಹುದಾದ ಅಂಶ ಮೊದಲಿನಿಂದಲೂ ಮರೆಯಾಗಿತ್ತು. ಒಪ್ಪಂದ ಮುರಿಯುವ ವಿಚಾರ ಸಭೆಯ ವಿಷಯ ಸೂಚಿಯಲ್ಲಿದ್ದರೂ ತಾನು ಅದರಲ್ಲಿ ಭಾಗವಹಿಸುವುದಿಲ್ಲ ಎಂದು ಪ್ರಮುಖ ವಿರೋಧ ಪಕ್ಷವೊಂದು ಹೇಳಿದ

ಡ್ರೂಸ್ ನಾಯಕ ವಾಲಿದ್ ಜಂಬ್ಲಟ್ ಅವರ ನೇತೃತ್ವದ ಪ್ರಗತಿಪರ ಸಮಾಜವಾದಿ ಪಕ್ಷದ ವಕ್ತಾರರೊಬ್ಬರು ಡಮಾಸ್ಕಸ್‌ನಲ್ಲಿ "ಈ ಫ್ಯಾಸಿಸ್ಟ್ ಆಡಳಿತದಲ್ಲಿ ನಮಗೆ ನಂಬಿಕೆ ಇಲ್ಲ. ಮೇ ಒಪ್ಪಂದವನ್ನು ಅದು ಪುನರ್ ಪರಿಶೀಲಿಸಿದರೂ ನಮಗೆ ನಂಬಿಕೆ ಇಲ್ಲ. ಏಕೆಂದರೆ ಯಾವುದೇ ಒಪ್ಪಂದ ಅಥವಾ ಪರಿಹಾರಕ್ಕಾಗಿ ಈ ಆಡಳಿತದೊಂದಿಗೆ ಭಾಗವಹಿಸುವುದೆಂದರೆ ಅದರ ಅಪರಾಧ ಮತ್ತು ನರಹತ್ಯೆಗಳನ್ನು ಮರೆ ಮಾಚಿದಂತೆಯೇ" ಎಂದು ಹೇಳಿದ್ದಾರೆಂದು "ಪೇಟ್ರಿಯಟ್" ಪತ್ರಿಕೆ ವರದಿ ಮಾಡಿದೆ.

ಗೆಮಯಲ್ ಎಸಗಿರುವ ಅತ್ಯಂತ ಹೀನ ಕೃತ್ಯವೆಂದರೆ 1982 ರ ಸೆಪ್ಟೆಂಬರ್‌ನಲ್ಲಿ ಷಾತಿಲ್ಲಾ ಮತ್ತು ಸಬ್ರಾ ನಿರಾಶ್ರಿತರ ಶಿಬಿರಗಳಲ್ಲಿ ಸ್ತ್ರೀ ಪುರುಷ ಮತ್ತು ಮಕ್ಕಳ ಅಮಾನುಷ ಹತ್ಯೆ. ಗೆಮಯಲ್ ಅವರ ತಮ್ಮ ಬಷಿರ್ ಕಟ್ಟಡ ಸ್ಫೋಟದಲ್ಲಿ ಸತ್ತ ಎರಡು ದಿನದ ನಂತರ ಈ ನರಮೇಧವನ್ನು ಗೆಮಯಲ್ ಅವರ ಬಲಪಂಥೀಯ ಫಲಾಂಗೆ ಪಕ್ಷ ನಡೆಸಿತ್ತು. ಆಗ ಅಧ್ಯಕ್ಷರಾಗಿದ್ದ ಬಷಿರ್ ಅವರ ಹತ್ಯೆ ಇಸ್ರೇಲಿನ ಏಜಂಟರಿಂದ ಆಗಿರಬಹುದೆಂಬ ಸಂದೇಹ ಇದೆ. ಆಕ್ರಮಿತ ಇಸ್ರೇಲಿ ಸೇನೆಯ ಸಹಕಾರ ಇದ್ದುದರಿಂದಲೇ ಈ ನರಮೇಧ ಸಾಧ್ಯವಾಯಿತು. ಮೂರು ತಿಂಗಳ ಮುನ್ನ ಫಲಾಂಗವಾದಿಗಳ ನೆರವಿನಿಂದ ಇಸ್ರೇಲ್ 25,000 ಕ್ಕೂ ಹೆಚ್ಚು ಪ್ಯಾಲೆಸ್ಟೈನಿಯರ ನರಹತ್ಯೆಗೆ ಕಾರಣವಾಗಿತ್ತು.

ಲೆಬನಾನಿನ ಇತಿಹಾಸವೇ ಹಾಗೆ. 1930ರ ದಶಕದಲ್ಲಿ ಫ್ರಾನ್ಸ್ ಆಗಿನ ಸಿರಿಯಾದಿಂದ ಇದನ್ನು ಬೇರ್ಪಡಿಸಿತು. ಬಹುಸಂಖ್ಯಾತ ಕ್ರಿಶ್ಚಿಯನ್ನರಿಗೆ ಆಡಳಿತ ಕೊಡಲಾಯಿತು. ಆಗಿನಿಂದಲೂ ಕ್ರಿಶ್ಚಿಯನ್ನರ ವಿವಿಧ ವರ್ಗಗಳ ನಡುವೆ ಘರ್ಷಣೆ ನಡೆದೇ ಇವೆ. ಅತ್ಯಂತ ಕ್ರೂರಿ, ಜನ ಹತ್ಯೆಗೆ ಪ್ರೇರಕರೆಂದರೆ ಬಷಿರ್ ಗೆಮಯಲ್. ತಮ್ಮ ಫಲಾಂಗೆ ಪಕ್ಷ ಮತ್ತು ಸೇನೆಯನ್ನು ನಿರಾತಂಕವಾಗಿ ಕ್ರಿಶ್ಚಿಯನ್ ವರ್ಗಗಳ ಮೇಲೆ ಅಲ್ಲದೆ ಮುಸ್ಲಿಮರ ಮೇಲೂ ಹರಿಸಿಬಿಟ್ಟ ಭೂಪ ಆತ. ಈಗ ದೇಶದಲ್ಲಿ ಬಹುಸಂಖ್ಯಾತರಾಗಿರುವ ಮುಸ್ಲಿಮರು ಅಂದು ಎರಡನೆ ದರ್ಜೆ ನಾಗರಿಕರಾಗಿದ್ದರು. ವ್ಯಾಪಾರ ಮತ್ತು ವಾಣಿಜ್ಯವು ಕ್ರಿಶ್ಚಿಯನ್ನರ ಕೈಯಲ್ಲೇ ಇತ್ತು.

ಅಧ್ಯಕ್ಷರಾಗಿ ಆಯ್ಕೆಯಾದಾಗ ಬಷಿರ್ ಗೆಮಯಲ್‌ಗೆ ನೂರಾರು ಕನಸುಗಳಿದ್ದವು. 15,000 ಫಲಾಂಗೆ ಸೇನೆ ಮತ್ತು 20,000 ಲೆಬನಾನ್ ಸೇನಾಬಲದಿಂದ ಲೆಬನಾನಿನಾದ್ಯಂತ ಆಡಳಿತ ನಡೆಸಬೇಕೆಂದು ಮತ್ತು ಇಸ್ರೇಲಿ ಕೈಗೊಂಬೆಯಾಗಿರುವುದರಿಂದ ಬೇರ್ಪಡಲು ಅವರು ಆಶಿಸಿದ್ದರು. ತನ್ನಿಂದ ಜಾರುವುದಲ್ಲದೆ ತನ್ನ ಇನ್ನೊಂದು ಕೈಗೊಂಬೆ ಮೇಜರ್ ಸಾದ್ ಹದ್ದಾದ್ ಅವರನ್ನು ಸೆರೆಹಿಡಿಯಲು ಬಷಿರ್ ಯತ್ನಿಸುತ್ತಿದ್ದಾರೆಂದು ಇಸ್ರೇಲಿಗೆ ತಿಳಿಯಿತು. ಆದುದರಿಂದಲೇ 1982 ರಲ್ಲಿ ನಡೆದ ಬಷಿರ್ ಹತ್ಯೆಗೆ ಇಸ್ರೇಲ್ ಏಜಂಟ್ ಕಾರಣ ಎಂದು ಹೇಳಲಾಗಿರುವುದು, ಏಕೆಂದರೆ ತೀವ್ರ ಬಂದೋಬಸ್ತಿನ ಫಲಾಂಗೆ ಕೇಂದ್ರ ಕಟ್ಟಡದೊಳಗೆ ಹೋಗಿ ಬಾಂಬ್ ಸ್ಫೋಟಿಸುವ ಕಾರ್ಯ ಇಸ್ರೇಲಿ ಏಜಂಟರಿಂದ ಮಾತ್ರ ಸಾಧ್ಯ.

ಸಹೋದರನ ಕೊಲೆ ನಂತರ ಅಧಿಕಾರಕ್ಕೆ ಬಂದ ಅಮಿನ್ ಗೆಮಯಲ್ ಇಸ್ರೇಲ್ ಜೊತೆ 1983ರ ಮೇ ನಲ್ಲಿ ಒಪ್ಪಂದ ಮಾಡಿಕೊಂಡರು ಇದರಿಂದ ದಕ್ಷಿಣ ಲೆಬನಾನ್ ಅನ್ನು ಕಳೆದುಕೊಂಡಂತಾಯಿತು.

ಈ ಹಿನ್ನೆಲೆಗಳಿಂದಾಗಿ, ಇಸ್ರೇಲ್ ಮತ್ತು ಅಮೇರಿಕ ಜೊತೆ ಅಮಿನ್ ಅವರ ಎಲ್ಲ ಒಡಂಬಡಿಕೆಗಳು ಲೆಬನಾನ್‌ನಲ್ಲಿ ನ್ಯಾಯಯುತ ಒಪ್ಪಂದಕ್ಕೆ ನೆರವಾಗುವುದಿಲ್ಲ.

ಅದಕ್ಕೆ ಪ್ರತಿರೋಧವಾಗಿ, ಅವರ ಮೂಲಾಧಾರವೇ ಸೊನ್ನೆಯಾಗಿರುವಾಗ ಅರಬ್ ವಿಶ್ವದಲ್ಲಿ ಮಿಲಿಟರಿ ಪ್ರವೇಶ ಮಾಡಲು ಇಸ್ರೇಲ್ ಅಲ್ಲ, ಅಮೆರಿಕ ತ್ವರಿತ ಹೆಜ್ಜೆ ಇಡುತ್ತಿದೆ. ಅಮೇರಿಕ ತೆಗೆದುಕೊಂಡಿರುವ ಈ ಅಹಂಕಾರದ ಮತ್ತು ಅಪಾಯದ ಪಾತ್ರವು ಅರಬ್ ಜಗತ್ತಿಗೆ ಭಾರಿ ದುರಂತದ ಚಿಹ್ನೆಯಾಗಬಹುದು. ಅದೇ ವಿಶ್ವ ಶಾಂತಿಗೇ ಅಪಾಯ ತಂದೊಡ್ಡಬಹುದು.

ಚುನಾವಣಾ ಪೂರ್ವದ ರೈಲ್ವೇ ಮುಂಗಡ ಪತ್ರ

(5ನೇ ಪುಟದಿಂದ)

ಸಿದ್ದಾರೆ. ಅವರ ಹೇಳಿಕೆಯಂತೆ ಅಪಘಾತಗಳ ಸಂಖ್ಯೆ : 1981-82 : 791, 1982-83 : 721 ; 1983-84 : 679(ಫೆಬ್ರುವರಿ 84 ರವರೆಗೆ). ಆದರೆ, ಅಪಘಾತಗಳಲ್ಲಿ ಸತ್ತವರ ಮತ್ತು ಗಾಯಗೊಂಡವರ ಸಂಖ್ಯೆಗಳನ್ನಾಗಲೀ, ನಾಶವಾದ ಸರಕು ಸಾಮಗ್ರಿಗಳ ಮತ್ತು ಆಸ್ತಿ ಪಾಸ್ತಿಗಳ ಮೌಲ್ಯದ ಮೊತ್ತವನ್ನಾಗಲೀ ಮಂತ್ರಿಗಳು ಪ್ರಸ್ತಾಪಿಸಲೇ ಇಲ್ಲ ! ಇತ್ತೀಚಿಗಿನ ರೈಲ್ವೆ ಅಪಘಾತಗಳಲ್ಲಿ ಸಂಭವಿಸಿದ ಪ್ರಾಣ ಹಾನಿ, ಸಾಮಗ್ರಿಗಳ ನಷ್ಟಗಳನ್ನು ಗಮನಿಸಿದರೆ ಭಯದಿಂದ ಎದೆ ಒಡೆಯುವುದು.

ಆಡಿಟರ್ ಜನರಲ್ ವರದಿ ಮತ್ತು ಟೀಕೆ

ಮುಂಗಡ ಪತ್ರದೊಂದಿಗೇ ಪ್ರಥಮ ಬಾರಿ ರೈಲ್ವೆ ಖಾತೆಯ ಕರಿಣಾದ ಆಡಿಟರ್ ಜನರಲ್ ವರದಿ ಮತ್ತು ಟೀಕೆಯನ್ನು ಈ ಸಲ ಸಂಸತ್ತಿನಲ್ಲಿ ಮಂಡಿಸಲಾಯಿತು. ರೈಲ್ವೆ ಖಾತೆಯ ಕಾರ್ಯಕಲಾಪಗಳ ಕುರಿತು ಈ ವರದಿಯಲ್ಲಿ ಕಟುವಾಗಿ ಟೀಕಿಸಲಾಗಿದೆ.

1. ಅಪಘಾತಗಳ ನಂತರ ನಷ್ಟ ಪರಿಹಾರಗಳ ಪಾವತಿಯೂ ಸಮರ್ಪಕವಾಗಿ ನಡೆಯುತ್ತಿಲ್ಲ. 1982-83 ರಲ್ಲಿ ಸಾರಿಗೆ ಸಾಮಗ್ರಿಗಳ ನಷ್ಟ ಪರಿಹಾರದಲ್ಲಿ ಕೇವಲ ಶೇ 0.8 ರಷ್ಟು ರೈಲ್ವೆ ಖಾತೆ ಪಾವತಿ ಮಾಡಿದೆ ಎಂದು ತಿಳಿದು ಬಂದಿದೆ. ಅಪಘಾತಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ತತ್‌ಕ್ಷಣ ಸೂಕ್ತ ಕ್ರಮ ಕೈಕೊಳ್ಳಲೂ ರೈಲ್ವೆ ಖಾತೆ ವಿಫಲವಾಗಿದೆ. ರೈಲು ದಾರಿಗಳಲ್ಲಿ ದರೋಡೆಗಳಿಂದ ಪ್ರಯಾಣ ಅಪಾಯಕಾರಿಯಾಗುತ್ತಿದೆ.

2. 1979-80 ರಿಂದ ಸರಕು ಸಾಮಗ್ರಿಗಳ ದರ ಏರಿಕೆಯಲ್ಲಿ ಮೂಲಭೂತ ತತ್ವಗಳನ್ನು ಅನುಸರಿಸದೆ, ತಾತ್ಕಾಲಿಕ ಕ್ರಮಗಳನ್ನೇ ಕೈ ಕೊಳ್ಳುತ್ತಿರುವುದರಿಂದ ಹತ್ತಾರು ಸಮಸ್ಯೆಗಳು ಉದ್ಭವಿಸುತ್ತವೆ. ಅಂತಿಮ ಗ್ರಾಹಕರಿಗೆ ಅನ್ಯಾಯವಾಗಿ ಸಾರಿಗೆ ದರ ಹೆಚ್ಚಳದ ಭಾರ ಬೀಳುತ್ತಿದೆ.

3. 1968 ರ "ವಾಂಚೂ" ಮತ್ತು 1978 ರ "ಸಿಕ್ರಿ" ಸಮಿತಿಗಳ ಸಲಹೆಗಳಂತೆ ದುಸ್ಥಿತಿಗೊಳಗಾದ ರೈಲ್ವೆ ಸೇತುವೆಗಳನ್ನು ಯೋಜನಾಬದ್ಧವಾಗಿ ಪುನನಿರ್ಮಾಣ ಮಾಡುವ ಕೆಲಸ ಬಹಳ ಹಿಂದೆ ಬಿದ್ದಿದೆ. ಹಾಗೆಯೇ ಶೇ 25 ರಷ್ಟು ದೂರದ ರೈಲ್ವೆ ದಾರಿ 18678 ಕಿ. ಮೀ. ನವೀಕರಿಸ ಬೇಕಾಗಿದೆ. ಸಾವಿರಾರು ಸಿಗ್ನಲ್‌ಗಳು ನವೀಕರಿಸಬೇಕಾಗಿವೆ ಮತ್ತು ಮಾನವ ನಿಯಂತ್ರಣಕ್ಕೊಳಪಡಿಸಬೇಕಾಗಿವೆ. ಈ ಕೆಲಸ ಕಾರ್ಯಗಳ ಹಿನ್ನಡೆಯಿಂದಾಗಿ ಅಪಘಾತಗಳು ಸಂಭವಿಸುತ್ತಲೇ ಇದ್ದು ಅಪಾರ ಪ್ರಾಣ, ಆಸ್ತಿ ಹಾನಿ ಉಂಟಾಗುತ್ತಿದೆ.

4 ಅನವಶ್ಯಕ ಆಮದು, ಹೆಚ್ಚು ಸಾಮಗ್ರಿಗಳ ವ್ಯಯ, ಯಂತ್ರೋಪಕರಣಗಳ ಜೋಡಣೆಯಲ್ಲಿ ವಿಳಂಬ, ರೈಲ್ವೆ ಬಿಡಿ ಭಾಗಗಳ ಮತ್ತು ಬಂಡಿಗಳ ಉತ್ಪಾದನೆಯಲ್ಲಿ ಏರುಪೇರು, ಇತ್ಯಾದಿಗಳಿಂದ ಖಾತೆಗೆ ಭಾರೀ ನಷ್ಟವಾಗುತ್ತಿದೆ.

ಘನಿಖಾನ್ ಚೌದರಿಯವರು ತಮ್ಮ ಮುಂಗಡ ಪತ್ರದಲ್ಲಿ ಪ್ರಸ್ತಾಪಿಸಿದುದಕ್ಕಿಂತ ಬಚ್ಚಿಟ್ಟದ್ದೇ ಹೆಚ್ಚು ಎಂದು ಸಾರ್ವಜನಿಕರಿಗೆ ತಿಳಿಯಲು ಹೆಚ್ಚು ಸಮಯ ಬೇಕಾಗಲಾರದು. ಲಕ್ಷಾಂತರ ರೈಲ್ವೆ ನೌಕರರ ವೇತನ ಪರಿಷ್ಕರಣ, ಬಡತಿ, ತುಟ್ಟಿಭತ್ತೆ ನೀಡಿಕೆ. ವಸತಿ ಸೌಕರ್ಯ, ಇತ್ಯಾದಿಗಳನ್ನು ಅಲಕ್ಷಿಸಲಾಗುತ್ತಿದ್ದು ಕೈಗಾರಿಕಾ ಸಂಬಂಧವು ಹದಗೆಡುತ್ತಿದೆ.

ರೈಲ್ವೆ ಖಾತೆಯ ಹಿನ್ನಡೆ. ಅದಕ್ಷತೆ, ನೌಕರರ ಅತೃಪ್ತಿಗಳಿಂದ ದೇಶದ ಕೈಗಾರಿಕಾಕರಣ ಮತ್ತು ಆರ್ಥಿಕ ಅಭಿವೃದ್ಧಿ ಸ್ಥಗಿತಗೊಳ್ಳುತ್ತಿದೆ.

ಬಸ್ ತಡೆ ಚಳುವಳಿ, ಕಾಂಗ್ರೆಸ್ ಕಲ್ಲು ತೂರಾಟ.

ಹರಪನಹಳ್ಳಿ ತಾಲ್ಲೂಕಿನ ರಾಗಿಮಸಲವಾಡ ಗ್ರಾಮದ ಪ್ರಾಂತ ರೈತ ಸಂಘದವರು 6 ತಿಂಗಳ ಹಿಂದೆ ತಮ್ಮ ಹಳ್ಳಿಯ ತೀವ್ರ ಸಮಸ್ಯೆಗಳಿಗೆ ತುರ್ತು ಪರಿಹಾರ ಕೋರಿ ಮನವಿಯನ್ನು ಸಲ್ಲಿಸಿದ್ದರು. ಇದುವರೆವಿಗೂ ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದ ಪ್ರಯುಕ್ತ ಇತ್ತೀಚೆಗೆ ಬಸ್ ತಡೆ ಚಳುವಳಿಯನ್ನು ನಡೆಸಿದರು. ಹೆಚ್ಚಿನ ಜನ ಸಂಖ್ಯೆ ಇರುವ ಈ ಗ್ರಾಮಕ್ಕೆ ರಸ್ತೆ ಇದ್ದರೂ ಬಸ್

(8ನೇ ಪುಟ ನೋಡಿ)

ಸಂಕುಚಿತ ಹಿತಾಸಕ್ತಿ ಬದಿಗಿಟ್ಟು ಸಮಸ್ಯೆ ಬಗೆಹರಿಸಿ

(3ನೇ ಪುಟದಿಂದ)

ಈಗ ಕಾಣುವಂತಹ ಸ್ಥಿತಿ ಹಿಂದೆಂದೂ ಇರಲಿಲ್ಲ. 1947 ಕ್ಕಿಂತಲೂ ಹದಗೆಟ್ಟಿರುವ ಸ್ಥಿತಿ ಈಗಿನದು. ಇದಕ್ಕೆ ನಿಮ್ಮ ಮಂದಗತಿಯ ನಿಲುವೇ ಕಾರಣ" ಎಂದರು.

"ಶ್ವೇತಪತ್ರ ಹೊರಡಿಸಿ"

ಕಾಂ. ಸುರಜೀತ್ ಕಳೆದ ಎರಡು ವರ್ಷಗಳಲ್ಲಿ ಹಲವು ಬಾರಿ ಗೃಹಮಂತ್ರಿಗಳಿಗೆ, ಪ್ರಧಾನ ಮಂತ್ರಿಗಳಿಗೆ ಪರಿಸ್ಥಿತಿ ಉಲ್ಬಣಗೊಳ್ಳದಂತೆ ಕ್ರಮಕೈಗೊಳ್ಳಲು ಸಮಸ್ಯೆ ಬಗೆ ಹರಿಸಲು ಕೇಳಿಕೊಂಡಿದ್ದರು. ಇದನ್ನು ಪ್ರಸ್ತಾಪಿಸುತ್ತಾ ಅವರು ತಮ್ಮ ಭಾಷಣವನ್ನು ಮುಂದುವರಿಸಿ "ಈಗಲೂ ಸಮಸ್ಯೆ ಬಗೆ ಹರಿಸಿರೆಂದು ಕೇಳಿಕೊಳ್ಳುತ್ತೇನೆ. ಅಕಾಲಿ ಒಪ್ಪದಿದ್ದರೆ ವಿರೋಧ ಪಕ್ಷಗಳನ್ನು ಕರೆಯಿರಿ. ಒಟ್ಟಾಗಿ ಪಂಜಾಬಿನ ಜನತೆಯನ್ನು ಎದುರಿಸೋಣ. ನೀವು ಇದಕ್ಕೆ ಸಿದ್ಧರಿದ್ದೀರಾ ಎಂದು ತಿಳಿಯ ಬಯಸುತ್ತೇನೆ. ಭಿಂದ್ರನ್ ವಾಲೆಯನ್ನು ಬಯಲಿಗೆಳೆಯಲು ನೀವೇಕೆ ಹಿಂಜರಿಯುತ್ತೀರಿ? ಯಾಕೆ? ಯಾರಾತ? ಹಿಂದೆ ಆತನನ್ನು ಕಾಂಗ್ರೆಸ್ ಪಕ್ಷ ಎತ್ತಿ ಹಿಡಿದಿತ್ತು ಎಂಬುದಕ್ಕಾಗಿಯೇನು? ಅದನ್ನು ಮರೆತು ಬಿಡಿ. ಬಹಳ ಮಂದಿ ಬೇರೆ ಬೇರೆ ಪಕ್ಷಗಳಲ್ಲಿದ್ದರು ಅದನ್ನು ನೋಡಬೇಡಿ ಅಥವಾ ರಾಜಕೀಯವಾಗಿ ಆತನಿಲ್ಲದೆ ಸಂಧಾನ ಸಾಧ್ಯವಿಲ್ಲ ಎಂದು ನಿಮಗೆ ಯಾರಾದರೂ ಹೇಳಿದ್ದರೆ ಅದು ತಪ್ಪು. ಯಾವುದೇ ಪರಿಹಾರದಲ್ಲಿ ಆತ ಒಳಗೊಂಡಿದ್ದರೆ ಅದು ವಿನಾಶಕಾರಿ, ದೇಶ ವಿರೋಧಿ ಚಟುವಟಿಕೆಗಳಲ್ಲಿ ನಿರತರಾದವರನ್ನು, ಅಲ್ಪ ಸಂಖ್ಯಾತರನ್ನು ಕೊಲ್ಲಲು ಬಹಿರಂಗ ಕರೆ ನೀಡುವವರನ್ನು ಸೇರಿಸಿಕೊಳ್ಳುವುದು ಅತ್ಯಂತ ವಿನಾಶಕಾರಿ. ಆದ್ದರಿಂದ ಈಗಲಾದರೂ ತಡಮಾಡದೆ ಇವರ ಚಟುವಟಿಕೆಗಳ ಬಗ್ಗೆ ಶ್ವೇತಪತ್ರ ಹೊರಡಿಸಿ" ಎಂದು ಮತ್ತೊಮ್ಮೆ ಒತ್ತಾಯಿಸಿದರು; ತೀವ್ರಗಾಮಿಗಳ ಚಟುವಟಿಕೆಗಳನ್ನು ಬಯಲು ಮಾಡಿ, ಜನತೆಯ ವಿಶ್ವಾಸ ಪಡೆದು ತಾವು ಗಾಮಿಗಳ ವಿರುದ್ಧ ದೃಢ ಕ್ರಮಕೈಗೊಳ್ಳಬೇಕೆಂದು ಬೇಡಿಕೆಯಿತ್ತರು.

ಅಂತಿಮವಾಗಿ, ಕಾಂ. ಸುರಜೀತ್ ಮಂತ್ರಿಗಳ ಹೇಳಿಕೆಯ ಬಗ್ಗೆ ನಿರಾಶೆ ವ್ಯಕ್ತಪಡಿಸುತ್ತಾ, ಹೇಳಿಕೆಯ ಹಲವು ಮಾತುಗಳು ಸರಿಯಾಗಿಲ್ಲ ವಿರೋಧ ಪಕ್ಷಗಳ ಪಾತ್ರವನ್ನು ಅದರಲ್ಲಿ ವಿರೂಪಗೊಳಿಸಲಾಗಿದೆ ಎಂದು ಹೇಳಿ "ಆದರೂ ಸಮಸ್ಯೆ ಬಗೆಹರಿಸುವ ಸಾಧ್ಯತೆ ಇನ್ನು ಇದೆ. ವಾಸ್ತವವಾಗಿ, ನೀವು ನಿದ್ದೆ ಹೋಗುತ್ತೀರಿ. ಘಟನೆಗಳು ನಡೆದ ಮೇಲೆ ಎಚ್ಚರಗೊಳ್ಳುತ್ತೀರಿ. ಅಷ್ಟರಲ್ಲಿ ಕೆಲವು ಘಟನೆಗಳು ನಿಮ್ಮ ಹತೋಟಿ ಮೀರಿ ಹೋಗಿರುತ್ತವೆ. ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸಬೇಕೆಂದು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ. ವಿರೋಧ ಪಕ್ಷಗಳ ನೆರವು ಪಡೆದು ಸ್ಥಿತಿ ಸಾಮಾನ್ಯಗೊಳಿಸಲು ಪ್ರಯತ್ನಿಸಿ. ನೀವು ಕೈಗೊಳ್ಳುವ ಕ್ರಮಗಳಿಗೆ ನಮ್ಮೆಲ್ಲರ ಬೆಂಬಲವಿದೆ. ಪಕ್ಷದ ಸಂಕುಚಿತ ಹಿತಾಸಕ್ತಿಗಳನು ಬಿಟ್ಟು ಜಾತ್ಯಾತೀತತೆಯನ್ನು ನೀವು ರಕ್ಷಿಸುವುದಾದರೆ ನಮ್ಮೆಲ್ಲರ ಬೆಂಬಲ ನಿಮಗಿದೆ" ಎಂಬ ಆಶ್ವಾಸನೆಯಿತ್ತರು.

ಅಣು ಅಸ್ತ್ರ ಅಪಾಯದ ವಿರುದ್ಧ ವೈದ್ಯರ ಕರೆ

(1ನೇ ಪುಟದಿಂದ)

ಕೊಳ್ಳಲು ಶತಮಾನಗಳು ಸಾಲದು, ಭಾರತವನ್ನೊಳಗೊಂಡಂತೆ ಯಾವ ದೇಶವೂ ಈ ಅಪಾಯದಿಂದ ಹೊರತಲ್ಲ.

ಅಣುಯುದ್ಧದ ಸಿದ್ಧತೆಗಾಗಿ ಪ್ರಯೋಗಿಸುವ ಪ್ರಯೋಗಗಳು ಕೂಡ ಮನುಷ್ಯನ ಆರೋಗ್ಯ ಮತ್ತು ಸಂಪತ್ತಿಗೆ ಅಪಾರ ಹಾನಿ ತರಬಲ್ಲವು. ಅಲ್ಲದೇ, ಆರೋಗ್ಯ ಮತ್ತು ಸಮಾಜ ಕಲ್ಯಾಣಕ್ಕೆ ಉಪಯೋಗಿಸಬೇಕಾದ ಹಣವನ್ನು ರಕ್ಷಣೆಗೆ ಉಪಯೋಗಿಸಬೇಕಾಗುವುದು.

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನೇಮಿಸಿದ ತಜ್ಞರು ಮಹಾಸಭೆಯ 35ನೇ ಅಧಿವೇಶನಕ್ಕೆ (ಸೆಪ್ಟಂಬರ್ 1980) ಸಲ್ಲಿಸಿದ ವರದಿ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ 36ನೇ ಅಧಿವೇಶನಕ್ಕೆ (ಮೇ 1983) ವೈದ್ಯ ವಿಜ್ಞಾನ ಮತ್ತು ಸಾರ್ವಜನಿಕ ಆರೋಗ್ಯ ತಜ್ಞರು ಸಲ್ಲಿಸಿದ ವರದಿಯಲ್ಲಿ ಅಣುಯುದ್ಧದ ವಿನಾಶಕಾರಿ ಪರಿಣಾಮ ಕುರಿತು ಒತ್ತಿ ಹೇಳಲಾಗಿದೆ.

ಯುದ್ಧದ ಅಪಾಯ ಕುರಿತು ಜನತೆಯ ನಡುವೆ ಹೆಚ್ಚು ಪ್ರಚಾರ ನಡೆಸಬೇಕೆಂದು ಅಣುಯುದ್ಧದ ತಡೆಯ ಅಂತರ ರಾಷ್ಟ್ರೀಯ ವೈದ್ಯರ ಮಂಡಳಿಯು ವೈದ್ಯರಿಗೆ ಕರೆ ನೀಡಿವೆ.

ಅಣು ಅಸ್ತ್ರ ತಡೆಗೆ ಭಾರತೀಯ ವೈದ್ಯರ ಮಂಡಲಿಗಳನ್ನು ರಚಿಸಲು ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ವೈದ್ಯರುಗಳ ಸಭೆ ಸೇರಿ ನಿರ್ಧರಿಸಬೇಕೆಂದು ನಾವು ಕರೆ ನೀಡುತ್ತೇವೆ. ಇಲ್ಲಿನ ಮತ್ತು ವಿದೇಶಿ ವೈದ್ಯ ಮಂಡಲಿಗಳ ಸಹಕಾರದಿಂದ ಈ ತುರ್ತು ಜವಾಬ್ದಾರಿಯನ್ನು ಇದರಿಂದ ನಮ್ಮ ಜನತೆಗೆ ನೆರವೇರಿಸಲು ಸಹಾಯವಾಗುವುದೆಂದು ತಿಳಿದಿದ್ದೇವೆ.

ಅಣು ಅಸ್ತ್ರ ತಯಾರಿಸುತ್ತಿರುವ ಯಾವುದೇ ದೇಶಗಳು ತಾವು ಪ್ರಥಮ ಪ್ರಯೋಗ ಮಾಡುವುದಿಲ್ಲವೆಂದು ಈ ತಕ್ಷಣ ಸಾರಬೇಕೆಂದು ನಾವು ಕರೆ ನೀಡುತ್ತೇವೆ ಈ ಕೂಡಲೇ ಅಣು ಅಸ್ತ್ರ ತಯಾರಿಕೆ ನಿಲ್ಲಿಸಿ ವಿಶ್ವ ನಿಶ್ಶಸ್ತ್ರೀಕರಣ ಕುರಿತು ಮಾತುಕತೆ ಆರಂಭಿಸಬೇಕೆಂದೂ ನಾವು ಒತ್ತಿ ಹೇಳುತ್ತೇವೆ."

ಹಂಚಿನ ಮಜೂರರ ಹೋರಾಟ

(6ನೇ ಪುಟದಿಂದ)

ತನಕ ನಡೆಯುದಂತಹ ಈ ಹೋರಾಟದ ಪರಿಣಾಮವಾಗಿ, ಬೆಂಗಳೂರಿನಲ್ಲಿ ಸರಕಾರ, ಮತ್ತು ಮಜೂರರ ಪ್ರತಿನಿಧಿಗಳು ಕೂಡಿ ನಡೆಸಿದ ತ್ರಿಪಕ್ಷೀಯ ಸಭೆಯಲ್ಲಿ ಕಾರ್ಮಿಕ ಸಚಿವ ಶ್ರೀ ಅಜೀಜ್ ಶೇಟ್‌ರವರು "ಏರಿಳಿತ ತುಟ್ಟಿಭತ್ಯೆ"ಯ ಬಗ್ಗೆ ಕೊಟ್ಟ, ಸ್ಪಷ್ಟ ಭರವಸೆಯ ಬಳಿಕವೇ, ಮಾಲಕರ ಜತೆ ಮಿಕ್ಕ ಕೇಳಿಕೆಗಳ ಬಗ್ಗೆ ಒಂದು ಒಪ್ಪಂದಕ್ಕೆ ಮಾತುಕತೆ ನಡೆಸಿದ್ದಾಗಿದೆ. ಅಂದಿನ ತ್ರಿಪಕ್ಷೀಯ ಸಭೆಯಲ್ಲಿ ಐಟಕ್ ಮುಖಂಡರೂ ಭಾಗವಹಿಸಿ, "ಏರಿಳಿತ ತುಟ್ಟಿಭತ್ಯೆ"ಯ ಕೇಳಿಕೆಗೆ ಸಿಕ್ಕಿದ ಮನ್ನಣೆಯ ವಿಚಾರವಾವುದನ್ನೂ ತಮ್ಮ ನೋಟೀಸಿನಲ್ಲಿ ಉಲ್ಲೇಖಿಸದೆ ಮಜೂರರನ್ನು ದಾರಿ ತಪ್ಪಿಸುವ ಪ್ರಚಾರಕ್ಕೆ ತೊಡಗಿರುವುದು ಅವರ ದೃಷ್ಟಿಯಲ್ಲಿ "ನ್ಯಾಯ ಸಮ್ಮತ"ವಾಗಿದೆಯೆಂದೂ, ಅದು ಅವರ ಜನ್ಮಸಿದ್ಧ ಹಕ್ಕೆಂದೂ ಭಾವಿಸಿದಂತಿದೆ

ಈ ಹಿಂದೆ ನಮ್ಮೆರಡು ಯೂನಿಯನುಗಳು ಜತೆಯಾಗಿದ್ದಾಗ (1964ರ ಮೊದಲು) ಮಾಡಿಕೊಂಡಂತಹ ಒಪ್ಪಂದಗಳಿಗಿಂತಲೂ ಈ ಬಾರಿಯ ಒಪ್ಪಂದವು ಕೆಳಮಟ್ಟದ್ದಲ್ಲವೆಂಬುದನ್ನು ಮಜೂರರೇ ತಿಳಿದುಕೊಂಡಿದ್ದಾರೆಂಬುದನ್ನು ನಾವು ದೃಢವಾಗಿ ಹೇಳಬಲ್ಲೆವು.

ಇನ್ನು, ಅವರ ಸಂಘದವರೇ ಬಹುಸಂಖ್ಯೆಯಲ್ಲಿರುವ ಮಂಗಳೂರಿನ ಎರಡು ಕಾರ್ಖಾನೆಗಳಲ್ಲಿ ಮಜೂರರಿಗೆ ಇತರ ಕಾರ್ಖಾನೆಗಳಲ್ಲಿನ ಮಜೂರರಿಗಿಂತ ಹೆಚ್ಚು ಶ್ರಮಭಾರವಿದೆ. ಮಾತ್ರವಲ್ಲ ನಿರ್ದಿಷ್ಟ ಕೆಲಸದ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕ ಹೋದಲ್ಲಿ ಆಗ ಆಗುವ ಕೆಲಸದ ನಷ್ಟವನ್ನು ತುಂಬಿಕೊಡುವ ವಿಧಾನಕ್ಕೆ ಒಪ್ಪಿಕೊಂಡು ಈ ಐಟಕ್ ಸಂಘದವರು ಮಜೂರರ ನ್ಯಾಯ ಸಮ್ಮತವಾದ ಹಕ್ಕಿಗೇನೇ ಧಕ್ಕೆಯುಂಟು ಮಾಡಿದ್ದಾರೆ. ಇದರ ವಿರುದ್ಧ ಹೋರಾಟ ನಡೆಸಿದವರು- ಮಂಗಳೂರಿನ ಹಾಗೂ ಕುಂದಾಪುರದ ನಮ್ಮ ಸಂಘಟನೆಯ ಮಜೂರರು

ತುಟ್ಟಿಭತ್ಯೆ ಕೇಳಿಕೆಯ ಸೂತ್ರವನ್ನು ಸರಕಾರ ಒಪ್ಪಿದೆ. ಅದನ್ನು ಜ್ಯಾರಿಗೆ ತರುವ ಭರವಸೆ ನಮಗಿದೆ. ಅದನ್ನು ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ. ಅದಕ್ಕಾಗಿ ಸರಕಾರದೊಡನೆ ಹೋರಾಟ ನಡೆಸುವ ಹಕ್ಕನ್ನು ಒಪ್ಪಂದದಲ್ಲಿ ಬಿಟ್ಟು ಕೊಟ್ಟಿದ್ದೂ ಇಲ್ಲವೆಂಬುದನ್ನು ಐಟಕ್ ಮುಖಂಡರಿಗೆ ಮಜೂರರು ಮನದಟ್ಟು ಮಾಡುತ್ತಾರೆ.

ಐಟಕ್ ಮುಖಂಡರ ಹಿಂದಿನ ಕಾಂಗೈ ಬೆಂಬಲ-ಮಜೂರ ವಿರೋಧಿ ನೀತಿಯನ್ನು ಮಜೂರರು ಚೆನ್ನಾಗಿ ಬಲ್ಲರು.

ಇಂದಿನ ಪರಿಸ್ಥಿತಿಯಲ್ಲಿ ಈ ಒಪ್ಪಂದ ನ್ಯಾಯಸಮ್ಮತವಾಗಿದೆ. ಸರಕಾರ ಏರಿಳಿತ ತುಟ್ಟಿಭತ್ಯೆ (Variable D. A.) ಸೂತ್ರವನ್ನು ಒಪ್ಪಿ ಅದನ್ನು ಈ ಕೈಗಾರಿಕೆಯಲ್ಲಿ ತರುವ ಭರವಸೆ ಕೊಟ್ಟಿದ್ದನ್ನು ಮರೆತು ಈ ಒಪ್ಪಂದ ಮಾಡಲಿಲ್ಲ. ಸರಕಾರದ ಭರವಸೆಯನ್ನು ಈಡೇರಿಸಲು ಬೇಕಾದ ಹೋರಾಟದ ಸಿದ್ಧತೆಯಲ್ಲಿಯೇ ಈ ಒಪ್ಪಂದವನ್ನು ಮಾಡಿದ್ದಾಗಿದೆ ಹಂಚಿನ ಮಜೂರರು ತಮ್ಮ ಹೋರಾಟದಿಂದಲೇ ಕೆಲವು ಸವಲತ್ತುಗಳನ್ನು ಈ ತನಕ ಪಡೆದಿದ್ದಾರೆ. ಇನ್ನೂ ಪಡೆಯುವ ದೃಢ ನಿರ್ಧಾರದಿಂದಲೇ ಈ ಒಪ್ಪಂದಕ್ಕೆ ಒಪ್ಪಿ ಹೋರಾಟವನ್ನು ಹಿಂತೆಗೆದುಕೊಳ್ಳಲಾಗಿದೆ. ಸಿ. ಐ. ಟಿ. ಯು. ಇಂತಹ ಹೋರಾಟಗಳಿಗೆ ನೇತೃತ್ವ ಕೊಟ್ಟು ಮಜೂರರ ಹಿತರಕ್ಷಣೆಗೆ ಸದಾ ಸಿದ್ಧ ಎಂಬುದನ್ನು ಹಂಚಿನ ಮಜೂರರು ತಿಳಿದ ವಿಷಯ. ಆದುದರಿಂದ "ಐಟಕ್"ನ ಇಂತಹ ಅಪಪ್ರಚಾರಕ್ಕೆ ಹಂಚಿನ ಮಜೂರರು ಬಲಿಯಾಗುವುದಿಲ್ಲ ಮಾತ್ರವಲ್ಲ ಕಳೆದ ಎಷ್ಟೋ ವರ್ಷಗಳಿಂದ ಇಂತಹ ಅಪಪ್ರಚಾರದಲ್ಲಿಯೇ ಕಾಲಕಳೆಯುತ್ತಿರುವ "ಐಟಕ್" ಪ್ರಮುಖರು ಅವರ ಈ ನೀತಿಯಿಂದಾಗಿ ಅವರ ಹಿಂಬಾಲಕರು ತಮ್ಮ ಸಂಘಟನೆಯನ್ನು ಬಿಟ್ಟು ಹೋಗುತ್ತಿರುವುದನ್ನು ಗಮನಿಸಲಿ. ಅವರ ಈ ಮಜೂರ ದ್ರೋಹ ನೀತಿಗೆ ಕಾರ್ಮಿಕರು ಸರಿಯಾದ ಉತ್ತರ ಈ ಹಿಂದೆಯೂ ನೀಡಿದ್ದಾರೆ. ಇನ್ನೂ ನೀಡುವರು.

ಭಾಷಣ ಸ್ಪರ್ಧೆಗಳು

(2ನೇ ಪುಟದಿಂದ)

ಶ್ರೀ ಎಚ್. ಪಿ. ಜನಕರಾಜು. (ಬೆಂ. ವಿ.ವಿ. ರಾಜ್ಯಶಾಸ್ತ್ರ ವಿಭಾಗದ ಸಂಶೋಧಕ) ಭಾಗವಹಿಸಿದ್ದರು. ಪರ್ಯಾಯ ಪಾರಿತೋಷಕ ವಿಜೇತ ಎಸ್. ಜೆ. ಆರ್. ಸಿ. ಕಾಲೇಜು ತಂಡ ಹಾಗೂ ವಿ. ವಿ. ಪುರ ಕಾನೂನು ಕಾಲೇಜುಗಳ ತಂಡಗಳಿಗೆ ಚಿತ್ರ ನಟಿಯರಾದ ಶ್ರೀ ವೈಶಾಲಿಯವರು ಬಹುಮಾನ ವಿತ್ತರಣೆಯನ್ನು ಮಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ಎಸ್. ಎಫ್. ಐ. ರಾಜ್ಯ ಸಮಿತಿ ಖಜಾಂಚಿಯವರಾದ ಶ್ರೀ ಶಾಂತಕುಮಾರಿಯವರು ವಂದನಾರ್ಪಣೆಯನ್ನು ಮಾಡಿದರು.

ಕಾಂಗೈ ಕಲ್ಲು ತೂರಾಟ.

(7ನೇ ಪುಟದಿಂದ)

ಬಾರದೇ ಇದ್ದು, ಮೊನ್ನೆ ಒಬ್ಬ ರೈತನ ಹೆಂಡತಿಗೆ ಕಾಯಿಲೆ ಆಗಿ ಅವಳನ್ನು ಆಸ್ಪತ್ರೆಗೆ ಬಂಡಿಯಲ್ಲಿ ಒಯ್ಯುವಾಗ ದಾರಿಯಲ್ಲೇ ಮೃತಪಟ್ಟಳು 10 ನಿಮಿಷ ಬೇಗನೇ ಆಸ್ಪತ್ರೆಯನ್ನು ತಲುಪಿದರೆ ಆಕೆಯ ಜೀವ ಉಳಿಯ ಬಹುದಿತ್ತು. ಇಷ್ಟೆಲ್ಲಾ ಆದರೂ ಅಧಿಕಾರಿಗಳು ಬಸ್ಸನ್ನು ಬಿಡದೇ ಇದ್ದುದಕ್ಕಾಗಿ ಮತ್ತು ಇನ್ನು ಅನೇಕ ಸಮಸ್ಯೆಗಳನ್ನು ಈಡೇರಿಸದಿದ್ದಕ್ಕಾಗಿ ರಸ್ತೆ ತಡೆ ಚಳುವಳಿ ನಡೆಯಿತು. ಸ್ಥಳೀಯ ಅಧಿಕಾರಿಗಳಿಂದ 4 ದಿನದೊಳಗಾಗಿ ಬೇಡಿಕೆ ಈಡೇರಿಸುವುದಾಗಿ ಹೇಳಿದ ಮೇಲೆ ರಸ್ತೆ ತಡೆಯನ್ನು ನಿಲ್ಲಿಸಲಾಯಿತು.

ರೂ ೧ ಲಕ್ಷ ಪಾರ್ಟಿ ನಿಧಿಗೆ ಕರೆ

ಕಳೆದ ಒಂದು ವರ್ಷದಲ್ಲಿ ಪಾರ್ಟಿ ಮತ್ತು ಸಾಮೂಹಿಕ ಸಂಘಗಳ ಚಟುವಟಿಕೆಗಳು ತೀವ್ರ ಗತಿಯಲ್ಲಿ ಮುಂದುವರಿಯುತ್ತಿವೆ. ರಾಜ್ಯಾದ್ಯಂತ ರೈತ ಕಾರ್ಮಿಕರ ಹಲವಾರು ಹೋರಾಟಗಳು ನಡೆಯುತ್ತಿವೆ. ಜನತಾ ಸರಕಾರ ಅಧಿಕಾರದಲ್ಲಿದ್ದರೂ ಕೂಡ ಜನತೆಯ ಅಗತ್ಯದ ಬೇಡಿಕೆಗಳಿಗಾಗಿ ಹೋರಾಟ ನಡೆಸುವುದು ಅತ್ಯಗತ್ಯ. ಅಂಥ ಸಮಸ್ಯೆಗಳನ್ನು ಗುರ್ತಿಸಿ ಪಾರ್ಟಿ ತನ್ನ ಚಟುವಟಿಕೆಗಳನ್ನು ಹೋರಾಟಗಳನ್ನು ಮುಂದುವರಿಸಿ ಕೊಂಡು ಹೋಗಬೇಕಾಗಿದೆ.

ಈ ಎಲ್ಲಾ ಕಾರ್ಯಗಳನ್ನು ಯಶಸ್ವಿಗೊಳಿಸಬೇಕಾದರೆ ಪಾರ್ಟಿಗೆ ಹಣ ಅತ್ಯಗತ್ಯ. ಈ ವರ್ಷ ಒಂದು ಲಕ್ಷ ರೂ. ಪಾರ್ಟಿನಿಧಿ ಕೂಡಿಸಬೇಕೆಂದು ರಾಜ್ಯಸಮಿತಿ ನಿರ್ಣಯ ಮಾಡಿದೆ. ಕಾರ್ಮಿಕರೂ ರೈತರೂ, ವಿದ್ಯಾರ್ಥಿ-ಯುವ ಜನತೆ ಹಾಗೆಯೇ ಸಾರ್ವಜನಿಕರೆಲ್ಲ ಪಾರ್ಟಿ ನಿಧಿಗೆ ಧನಸಹಾಯ ಮಾಡಬೇಕಾಗಿ ವಿನಂತಿ.

ಪಿ. ರಾಮಚಂದ್ರ ರಾವ್
ಕಾರ್ಯದರ್ಶಿ

ಐಕ್ಯರಂಗ ಚಂದಾ ದರ

ವಾರ್ಷಿಕ ಚಂದಾ	30 ರೂ
ಅರ್ಧ ವಾರ್ಷಿಕ	15 ರೂ

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K V. Temple Street, Sultanpet. B-53. Phone : 24154
Editor : P. Ramachandra Rao